

— ೧೦೦೦ ರೂ. ಬಕ್ಷೀಸು —

**ಈ ಕೆಳಗಿನ ಔಷಧಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿಕೊಟ್ಟಲ್ಲಿ ೧೦೦೦ರೂ. ಇನಾಮು**

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

# ನಪುಂಸಕತ್ವಾರಿ ಗುಳಿಗೆ

**(ಷಂಡತ್ವನಾಶಕ ಗುಳಿಗೆಗಳು, ಕಿ. ೪ ರೂ. ಅಂ. ವೆ. ಬೇರೆ)**

ಮಿತಿಮೀರಿದ ಕಾಮುಕಜೀವನ, ಸ್ವಪ್ನಾವಸ್ಥೆ, ಮುಷ್ಟಿಮೈಥುನದ ಪರಿಣಾಮ ಹಾಗೂ ಅನೈಸರ್ಗಿಕ ಅಭ್ಯಾಸ ಮತ್ತು ಧಾತುಕ್ಷೀಣತೆ ಮುಂತಾದ ಯಾವದೇ ಕಾರಣದಿಂದ ಬಂದ ನಪುಂಸಕತ್ವ, ಇಂದ್ರಿಯ ಸಿಥಿಲತೆ ನಾಶಮಾಡಿ ನವಜೀವನ ಮತ್ತು ಹೊಸಪುರುಷತ್ವ ಪ್ರಾಪ್ತಮಾಡಿಕೊಡುವುದಕ್ಕಾಗಿ ಉತ್ತಮವಿದ್ದ ಬಗ್ಗೆ ೧೫ ವರ್ಷದಿಂದ ಎಲ್ಲೆಡೆಯಲ್ಲೂ ಪ್ರಖ್ಯಾತಿಹೊಂದಿವೆ.

ಅತಿಮೈಥುನ, ಸ್ವಪ್ನಾವಸ್ಥೆ, ಮುಷ್ಟಿ ಮೈಥುನ ಮತ್ತು ಅನೈಸರ್ಗಿಕ ಅಭ್ಯಾಸ ಮುಂತಾದ ಅಯೋಗ್ಯ ರೀತಿಯಿಂದ ಧಾತುಪಾತವಾದಲ್ಲಿ ಧಾತುಸ್ಥಾನದಲ್ಲಿ ಕಡಕಿ ಉತ್ಪನ್ನವಾಗಿ ಸಿರಗಳು ನಿರ್ಬಲ ಮತ್ತು ಸಿಥಿಲವಾಗಿ ನಪುಂಸಕತ್ವ ಸಹ ಪ್ರಾಪ್ತವಾಗುತ್ತದೆ.

ಈ ಔಷಧ ಸೇವನೆಯಿಂದ ನಿರ್ಬಲ ಮತ್ತು ಸಿಥಿಲವಾದ ಸಿರಗಳನ್ನು ಸಶಕ್ತವನ್ನಾಗಿಮಾಡಿ ಕುಂದಿಹೋದ ಪುರುಷತ್ವ ಪುನಃ ಬರುವದಲ್ಲದೆ ಕಡಕಿ ನಾಶವಾಗಿ ವೀರ್ಯವೃದ್ಧಿಯಾಗಿ ಗಟ್ಟಿಯಾಗಹತ್ತುವದು. ಪಚನಶಕ್ತಿ ಸುಧಾರಿಸಿ ಜಠರಾಗ್ನಿ ಉಜ್ವಲಮಾಡುತ್ತದೆ. ಬದ್ಧಕೋಷ್ಠ, ಅಜೀರ್ಣ ಅಪಚನಾದಿ ವಿಕಾರಗಳನ್ನು ದೂರಮಾಡಿ ನಿಯಮಿತ ಮಲಶುದ್ಧಿ ಮಾಡುತ್ತದೆ. ಶಾರೀರಿಕ ಮತ್ತು ಮಾನಸಿಕ ಅಶಕ್ತತೆಯನ್ನು ಹೋಗಲಾಡಿಸಿ ಜ್ಞಾನತಂತು ಸತೇಜವನ್ನಾಗಿ ಮಾಡಿ ನವಜೀವನ ಪ್ರಾಪ್ತಮಾಡಿಕೊಡುತ್ತದೆ. ಎಷ್ಟೋ ಔಷಧಗಳನ್ನು ತೆಗೆದುಕೊಂಡು ನಿರಾಶರಾದ ಪುರುಷರು ಸನ್ ೧೯೩೨ರಿಂದ ಈ ಔಷಧದಿಂದ ಏಳು ದಿವಸಗಳಲ್ಲಿ ಪೂರ್ಣ ಗುಣಹೊಂದಿರುವರು. ಈ ವಿಷಯವಾಗಿ ಆದ ಎಲ್ಲ ಪತ್ರವ್ಯವಹಾರವನ್ನೂ ಗುಪ್ತವಾಗಿರಿಸಲ್ಪಡುವದು. ಅನುಪಾನ ಪತ್ರಿಕೆ ಔಷಧದ ಕೂಡ. ಪಥ್ಯ: ಏನೂ ಇಲ್ಲ.

# ಪ್ರಮೇಹ ಗನೋರಿಯ ನಾಶಕ ಗುಟಿ

**ಕಿಮ್ಮತ್ತು ೪ —೮ —೦**

ಪ್ರಮೇಹ ವ್ಯಾಧಿಯಲ್ಲಿ ಭೇದಿಸಿದರೆ ತಮ್ಮ ಮತ್ತು ತಮ್ಮ ಭಾವೀ ಪೀಳಿಗೆಯ ನಾಶಮಾಡದೆ ಬಿಡಲಾರದು. ಇಂಥ ಮಹಾ ಹಾನಿಕಾರಕ ಎಲ್ಲಾ ೨೦ (ಇಪ್ಪತ್ತು) ಪ್ರಕಾರದ ಪ್ರಮೇಹ ಪರಮಾ ಆದರಿಂದ ಉದ್ಭವಿಸಿದ ಜನನೇಂದ್ರಿಯ ಸಂಬಂಧಿ ರೋಗ ಇವುಗಳ ಮೇಲೆ ಈ ಔಷಧವು ತೀವ್ರ ಗುಣಕಾರಿ ಅದೆ.

ಎಂತಹ ಹಳೇ ಪ್ರಮೇಹ ಇದ್ದರೂ ಕೂಡ ಈ ಔಷಧದ ಸೇವನೆಯಿಂದ ತ್ವರಿತ ಗುಣವಾಗುತ್ತದೆ. ಮೂತ್ರಮಾರ್ಗ ಸ್ವಚ್ಛವಾಗಿ ಮೂತ್ರದ ಕಾಲಕ್ಕೆ ಉಂಟಾಗುವ ವೇದನೆ ಮತ್ತು ಉರುಪು ಇಲ್ಲದಂತಾಗುತ್ತದೆ. ಕೀವು ಮತ್ತು ಪ್ರಮೇಹ ಹೋಗುವದು ಬಂದಾಗುತ್ತದೆ. ಮೂತ್ರಾಶಯದ ಎಲ್ಲ ವಿಕಾರಗಳನ್ನು ನಷ್ಟಪಡಿಸಿ ಶರೀರದಲ್ಲಿಯ ಅಶುದ್ಧ ತತ್ವಗಳನ್ನು ಮೂತ್ರಮಾರ್ಗದಿಂದ ಹೊರದೂಡಿ ಪ್ರಮೇಹ ಮತ್ತು ಆದರಿಂದ ಉದ್ಭವಿಸಿದ ಎಲ್ಲ ವ್ಯಾಧಿಗಳನ್ನು ಸಮೂಲ ನಷ್ಟಮಾಡಿ ಕಾಯಂ ಗುಣಪಡಿಸುತ್ತದೆ, ಅನುಪಾನ ಪತ್ರಿಕೆ ಔಷಧದ ಕೂಡ. ಪಥ್ಯ ಏನೂ ಇಲ್ಲ. ಕಿಮ್ಮತ್ತಿನ ಹೊರ್ತಾಗಿ ಅಂಚೆವೆಚ್ಚ ಬೇರೆ.

**ಕಿ.] ವನಿತಾ ಕಲ್ಯಾಣ ಪ್ರದರಾಂತಕ [೫—೦—೦**

ಸ್ತ್ರೀಯರ ಪದರ ಶೆರಗು ಇಲ್ಲವೆ ಮುಟ್ಟಿನ ದೋಷ ಮತ್ತು ಗರ್ಭಾಶಯ ಸಂಬಂಧಿ ವಿಕಾರ ಇವುಗಳ ಮೇಲೆ ಅತ್ಯಂತ ಉಪಯುಕ್ತವಿದೆ—

ಶ್ವೇತ—ರಕ್ತಪ್ರದರ, ಮುಟ್ಟು ಹೆಚ್ಚು ಕಡಿಮೆ ಅನಿಯಮಿತ ಮುಟ್ಟಾಗುವಿಕೆ ಮುಟ್ಟಿನ ಕಾಲಕ್ಕೆ ರಕ್ತಸ್ರಾವ ಆಗದೆ ಗುಲಾಬಿ, ಹಳದಿ, ಕೆಪ್ಪು ಮುಂತಾದ ಬಣ್ಣದ ದುರ್ಗಂಧಯುಕ್ತ ಮುಟ್ಟು ನೀರಿನಂತೆ ಹೋಗುವಿಕೆ ಇವೆಲ್ಲವುಗಳನ್ನು ಖಂಡಿತವಾಗಿ ನಷ್ಟಪಡಿಸುತ್ತ. ಇದರ ಸೇವನೆಯಿಂದ ಪ್ರದರ ಮತ್ತು ಮುಟ್ಟು ದೋಷ ಇವುಗಳಿಂದ ಕೆಪ್ಪಟ್ಟ ಗರ್ಭಾಶಯ ಇಲ್ಲವೆ ಕುಸುಮದಲ್ಲಿ ಆಗುವ ವೇದನೆ, ನಡು, ತಲೆ, ತೊಡೆ, ಮತ್ತು ಸಂದು ಇವುಗಳಲ್ಲಿ ನೋವು ಸಂಭೋಗ ಸಮಯದಲ್ಲಿ ಕಷ್ಟ, ಗರ್ಭಧಾರಣೆ, ಆಗದಿರುವಿಕೆ ಆದರೂ ಗರ್ಭಪಾತ ಮುಂತಾದ ಎಲ್ಲ ವಿಕಾರ ಮತ್ತು ಅದರಿಂದ ಉತ್ಪನ್ನವಾದ ಎಲ್ಲ ರೋಗಗಳನ್ನೂ ನಾಶಮಾಡಿ ಶರೀರದಲ್ಲಿ ಬಲ ಪುಷ್ಟಿ ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾಗುತ್ತದೆ. ಈ ಔಷಧ ಸೇವನೆಯಿಂದ ಸಾವಿರಾರು ಸ್ತ್ರೀಯರು ಗುಣಹೊಂದಿದ್ದಾರೆ. ಪಥ್ಯ ಏನೂ ಇಲ್ಲ. ಅ. ವೆ. ಬೇರೆ.

**ಪತ್ತೆ—ವೈದ್ಯರಾಜ ಎ. ಬಿ. ಸಿದನಾಳ,**

ಮನೆ ನಂಬರ ೧೩೪೮, ಎ. ಯು. ಬಸವಣಗಲ್ಲಿ, ಬೆಳಗಾವಿ.

— ಸಂಪಾದಕರು —
ಕೆ. ಕೆ. ಶೆಟ್ಟಿ.
ಕೆ. ಎಚ್. ಶೆಟ್ಟಿ.

— ಸಹಸಂಪಾದಕರು —
ಎಂ. ವಿ. ಹೆಗ್ಡೆ
ಯು. ಎಸ್. ಭಟ್

ಸಲಹೆಗಾರರ ಮಂಡಲ
ಶ್ರೀ. ಬಿ. ವಾಸುದೇವರಾವ್, ಬಿ. ಎ. ಬಿ. ಎಲ್.
ಶ್ರೀ. ಕೊರಡ್ಕಲ್ ಶ್ರೀನಿವಾಸರಾವ್.
ಶ್ರೀ. ಆರ್. ಎಸ್. ಶೆಣೈ.
ಶ್ರೀ. ಪಿ. ಎ ಉಪಾಧ್ಯಾಯ, ಬಿ. ಎ. ಎಲ್ ಎಲ್. ಬಿ.
ಶ್ರೀ. ಆರ್. ಆರ್. ಕುಂಜೂರು.
ಶ್ರೀ. ಬನ್ನಂಜೆ ರಾಮಾಚಾರ್ಯ,
ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈ ರಾಷ್ಟ್ರಭಾಷಾವಿಶಾರದ
ಶ್ರೀ. ಎಚ್. ಆರ್. ನಾಯಕ್.

ವ್ಯಾಪಾರ ಪಾಲಕ:
ಕೆ. ಎಚ್. ಶೆಟ್ಟಿ.

# ಅಂತರಂಗ

ಸಂಪುಟ ೫. ಸಪ್ಟಂಬರ ೨೪, ೧೯೪೦ ಸಂಚಿಕೆ ೧೧೩
Vol 5 September 24,1940 No. 113

## ನಮಗೆ ಬಂದ ಸಂದೇಶಗಳು

ಅಂತರಂಗದ 'ಉಪನಯನ' 'ನವಯುಗ'ದ ಕರದಲ್ಲಿ ನಡೆಯುವಾಗ, ನಮ್ಮೆಲ್ಲರ ಶುಭಾಕಾಂಕ್ಷೆಯಲ್ಲದೆ ಇನ್ನೇನು?

ಕೋಟ ಶಿವರಾಮ ಕಾರಂತ.

---

ನಿಮ್ಮ ದಕ್ಷ ಆಡಳಿತದಲ್ಲಿ ಅಂತರಂಗವು ಜಯಶೀಲವಾಗುವುದೆಂದು ನನಗೆ ವಿಶ್ವಾಸವಿದೆ.

ಡಾಕ್ಟರ್ ಕೆ. ವಿಟ್ಠಲ ಶೆಟ್ಟಿ.

ANTARANGA
ILLUSTRATED KANARESE
WEEKLY MAGAZINE.



**South Kanara District Board Office,**
**MANGALORE, S. Kanara,**
*16th September, 1940.*

I am extremely happy to learn that you have taken up the responsibility of conducting the '**Antaranga**' and that you propose to send out the first issue on the 24th instant. I feel confident that '**Antaranga**' will be a great success under your able management. In these days when public opinion has got to be whipped up in the right manner, one has to welcome newspapers which come under the control of able impartial and efficient hands. I need hardly say that I shall be very happy to extend my support and coperation for your new enterprise and wish '**Antaranga**' all success that it deserves.


*Yours sincerely,*
**K. VITTAL SHETTY,**
***President, District Board.***

**ದ. ಕ. ಜಿಲ್ಲಾ ಬೋರ್ಡು ಆಫೀಸು**
**ಮಂಗಳೂರು** ದ. ಕ.

16ನೇ ಸಪ್ಟಂಬರ 1940

ನೀವು ಅಂತರಂಗವನ್ನು ನಡಿಸುವ ಜವಾಬ್ದಾರಿ ಹೊತ್ತು ಅದರ ಪ್ರಥಮ ಸಂಚಿಕೆಯನ್ನು ಇದೇ ತಾ. 24ರಲ್ಲಿ ಹೊರಡಿಸುವಿರೆಂದು ತಿಳಿದು ನಾನು ಬಹಳ ಸಂತೋಷಗೊಳ್ಳುವೆನು. ನಿಮ್ಮ ಸಮರ್ಥ ಆಡಳಿತದಲ್ಲಿ ಅಂತರಂಗವು ಜಯಶೀಲವಾಗುವುದೆಂದು ನನಗೆ ವಿಶ್ವಾಸವಿದೆ. ಜನಮತವನ್ನು ಯುಕ್ತರೀತಿಯಲ್ಲಿ ಹೊಡೆದೆಬ್ಬಿಸಬೇಕಾಗಿರುವ ಈ ಕಾಲದಲ್ಲಿ ಪತ್ರಿಕೆಗಳು, ದಕ್ಷ ಚತುರ ಹಾಗೂ ನಿಷ್ಪಕ್ಷಪಾತಿಗಳ ಆಡಳಿತಕ್ಕೆ ಹೋಗುವುದನ್ನು ಸ್ವಾಗತೀಕರಿಸಲೇ ಬೇಕು. ನಿಮ್ಮ ಹೊಸ ಉದ್ಯಮಕ್ಕೆ ಸಹಾಯ ಮತ್ತು ಸಹಕಾರವೀಯಲು ನಾನು ಬಹಳ ಆನಂದ ಪಡುವೆನೆಂದು ಹೇಳುವ ಅವಶ್ಯವೇ ಇಲ್ಲ. ಅಂತರಂಗವು ಜಯಶೀಲವಾಗಿ ಚಿರಾಯುವಾಗಲಿ.

ನಿಮ್ಮ ಹಿತಾಭಿಲಾಷಿ,
**ಕೆ. ವಿಟ್ಠಲ ಶೆಟ್ಟಿ**
ಜಿಲ್ಲಾ ಬೋರ್ಡು ಅಧ್ಯಕ್ಷ.



ಜನಜೀವನದ ಬಾಳುವೆಯಲ್ಲಿ ನಗು ಬಹಳ ಬೇಕು; ಬಡತನ ದುಃಖಗಳು ಮನೆಮನೆ ಬಿಡಾರ ಮಾಡಿದಲ್ಲಿ ನಗುವಿಗಿಂತ ದೊಡ್ಡ ಹೊನ್ನಿಲ್ಲ, ಹರಕೆಯಿಲ್ಲ. ಮೌಢ್ಯ, ಅಜ್ಞಾನ ಪರಂಪರೆಯ ಕಟ್ಟಳೆಗಳು ಆಳುವಲ್ಲಿ ನಗುವೇ ಚಿಕಿತ್ಸಕ. ತಾವು ಹೊಸತಾಗಿ ವಹಿಸಿಕೊಂಡ ಈ ಉದ್ಯಮ—ನಾಡಿನ ಅಂತರಂಗದ ಕೊರಗು, ಮಾಲಿನ್ಯಗಳನ್ನು ತೊಳೆಯಲಿ, ನಗುವನ್ನು ಹೆಚ್ಚಿಸಿ, ಜೀವನವನ್ನು ಉಕ್ಕಿಸಲಿ.

ತಮ್ಮ ಪತ್ರಿಕೆಯು ವಿನೋದಕ್ಕೆ ಮೀಸಲಾಗಿದೆ. ಆದರೆ ನಮ್ಮ ನಾಡು ಇನ್ನೂ ವಿನೋದ ನಗುವಿನ ಬೆಳಕನ್ನೂ ಸಮನಾಗಿ ಕಾಣಬೇಕು. ನಗೆಗಾರನು ನಂಜುಕಾರನಾಗಬಾರದು. ನಗೆಗಾರನ ನಗೆ ಅಶ್ಲೀಲತೆ, ವ್ಯಕ್ತಿದ್ವೇಷಗಳ ಮೇಲೆ ಬೆಳೆಯಬಾರದು. ನಗೆಗಾರನು ವ್ಯಕ್ತಿಗಳನ್ನು ಮರೆತು, ವಿಮರ್ಶೆಯ ಗಳಿಗೆಯಲ್ಲಿ ಬರಿಯ ಕೃತಿಗಳನ್ನು ಚುಚ್ಚಿ ನಗಿಸಲು ತನ್ನನ್ನು ಕಂಡು ಓದುಗನು ನಗುವಂತಹ ಚೆಲುವಿನ ಹಾಸ್ಯ ಅದರಲ್ಲಿ ತುಂಬಲಿ. ಅಣಕ, ಅಪಹಾಸ್ಯ, ಲಘುಹಾಸ್ಯ ಇವುಗಳ ವಿವಿಧ ರೂಪಗಳಿಗೆ ಅಂತರಂಗ ಮನೆಯಾಗಿ, ನಾಡನ್ನು ಜೈಸಲಿ. 'ಟಿಟ್ ಬಿಟ್ಸ್' 'ಪಂಚ್'ನಂಥ ಪತ್ರಿಕೆಗಳ ಉದ್ದಾಮತೆ ಶಕ್ತಿಗಳು ಅದಕ್ಕೆ ಉಂಟಾಗಲಿ.

ನಗೆಗಾರನ ಮನಸ್ಸಿನ ಮಟ್ಟ, ಸಂಸ್ಕೃತಿ, ವಿಚಾರ, ಪ್ರತಿಭೆಗಳಲ್ಲಿ ಎಷ್ಟು ಉನ್ನತವಾಗಿ ಹಾರುವುದೋ ಅಷ್ಟೇ ಉತ್ಕೃಷ್ಟವಾದ ನಗೆಯು ಸೂಸುವುದು. ಅದು ಜಗವನ್ನು ಚೇತರಿಸುವುದು.

ಅಂತರಂಗದ 'ಉಪನಯನ' 'ನವಯುಗ'ದ ಕರದಲ್ಲಿ ನಡೆಯುವಾಗ ನಮ್ಮೆಲ್ಲರ ಶುಭಾಕಾಂಕ್ಷೆಯಲ್ಲದೆ ಇನ್ನೇನು?

ಇಂತಿ

**16–9–1940.** **ಶಿವರಾಮ ಕಾರಂತ.**

# ಅಂತರಂಗ

**ಸಪ್ಟಂಬರ್ ೨೪, ೧೯೪೦**


## ಮುಂದಿನ ರೂಪರೇಖೆ

ಹೊಸ ಆಡಳಿತಕ್ಕೊಳಗಾದ ಮೇಲೆ ಪ್ರಥಮವಾಗಿ ಹೊರಡುವ ಸಂಚಿಕೆಯಿದು. ಹಳೆಯ ಆಡಳಿತ ಕಂಪೆನಿಗೊದಗಿದ ವಿಪತ್ತಿನ ಪರಿಣಾಮವಾಗಿ ಈ ಸಂಚಿಕೆಯು ಹೊರಬೀಳುವುದೋ ಇಲ್ಲವೋ ಎಂಬ ಸಂದೇಹವು ನಮ್ಮಲ್ಲಿದ್ದಿತು. ಬಹಳ ಶ್ರಮವಹಿಸಿ ಹೊರಡಿಸಬೇಕಾಯಿತು. ಆದುದರಿಂದ ಈ ಸಲದ ಸಂಚಿಕೆಯು ನಮ್ಮಿಚ್ಛೆ ಪ್ರಕಾರ ಹೊರಬಿದ್ದಿಲ್ಲ. ಇನ್ನೂ ಕೆಲವು ಸಂಚಿಕೆಗಳು ಇದೇ ರೀತಿ ಹೊರಡಬೇಕಾದೀತು. ಇನ್ನು ಒಂದೆರಡು ತಿಂಗಳೊಳಗೆ ಅಂತರಂಗವು ಸ್ಥಿರವಾದ ವ್ಯವಸ್ಥೆಯನ್ನು ಪಡೆದು ನವನವ ಸುಧಾರಣೆ ತಳೆದು ಕ್ರಮವಾಗಿ ಮತ್ತು ಸರ್ವಾಂಗ ಸುಂದರವಾಗಿ ಹೊರಬರುವುದೆಂದು ವಾಚಕರಿಗೆ ನಾವು ಭರವಸೆ ಕೊಡುವೆವು. ಇಷ್ಟರಲ್ಲೇ ಅದಕ್ಕೆ ಬೇಕಾದ ಸಿದ್ಧತೆ ನಡೆದಿರುವುದು.

ಅಂತರಂಗಕ್ಕೆ ಪ್ರೀತಿಪೂರ್ವಕವಾದ ಸಂದೇಶ ಕಳುಹಿಸಿರುವ ಶ್ರೀ। ಕಾರಂತರ ಸೂಚನೆಯಂತೆಯೇ ಅದನ್ನು ನಡಿಸಬೇಕೆಂದು ನಮ್ಮ ಆಕಾಂಕ್ಷೆ. ನಮ್ಮ ಆಂತರ್ಯವನ್ನವರು ಅವರ ಸರಸ ಮಾತುಗಳಿಂದ ಚೆನ್ನಾಗಿ ಚಿತ್ರಿಸಿರುವರು. ಅವರಿತ್ತಬುದ್ಧಿವಾದವನ್ನು ಶಿರಸಾ ವಹಿಸುವೆವು. "ಟಿಟ್ ಬಿಟ್ಸ್" ಮೊದಲಾದ ಉತ್ಕೃಷ್ಟ ಆಂಗ್ಲೇಯ ವಿನೋದ ಪರ ಪತ್ರಿಕೆಗಳ ಮಾದರಿಯನ್ನನುಸರಿಸಿ ಕರ್ನಾಟಕದ ದೊಡ್ಡದೊಂದು ಅಭಾವವನ್ನು ಪೂರೈಸಬೇಕೆಂಬುದೇ ನಮ್ಮ ಹಿರಿಯಬಯಕೆ. ಯಾರಲ್ಲಿಯೂ ಜಿಗುಪ್ಸೆಯನ್ನುಂಟುಮಾಡದೆ, ಯಾರ ಮನಸ್ಸನ್ನೂ ನೋಯಿಸದೆ, ಕನ್ನಡಿಗರೆಲ್ಲರಿಗೂ ನಗೆಯ ಸುಗ್ಗಿಯಾಗಿ, ಆನಂದದ ಹಬ್ಬವಾಗಿ, ಬಗೆ ವಿಕಾಸದ ಬೆಳಕಾಗಿ ಅಂತರಂಗವನ್ನು ನಡಿಸಲು ನಾವು ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನಿಸುವೆವು. ಕನ್ನಡ ದೇವಿಯ ಮೊಗವನ್ನು ಅಂತರಂಗದ ನಗುವಿನ ಬಗೆಯಿಂದ ಅರಳಿಸಲೆತ್ನಿಸುವೆವು. ಕನ್ನಡಿಗರೆಲ್ಲರೂ ನಮಗೆ ಕೈಕೊಟ್ಟು ನಡೆಸಲೆಂದು ಕರಜೋಡಿಸಿ ಬೇಡಿಕೊಳ್ಳುವೆವು.

ನಮ್ಮ ಮೇಲಿನ ಪ್ರೀತಿಯಿಂದ ಸಂದೇಶ ಕಳುಹಿಸಿ ನಮ್ಮನ್ನು ಪ್ರೋತ್ಸಾಹಿಸಿದುದಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ. ಡಾಕ್ಟರ್ ಕೆ. ವಿಠಲ ಶೆಟ್ಟರಿಗೂ, ನಮ್ಮ ಬಂಧು ಶ್ರೀ. ಕೋ. ಶಿ. ಕಾರಂತರಿಗೂ ನಮ್ಮ ಹೃತ್ಪೂರ್ವಕ ವಂದನೆ.

---

## ಮಹಾತ್ಮಾ ಗಾಂಧಿಯವರು

ಯುದ್ಧ ವಿರುದ್ಧವಾಗಿ ಅಹಿಂಸಾತ್ಮಕ ಪ್ರಚಾರಮಾಡುವ ಹಕ್ಕು ಪಡೆಯಲು ಪುನಃ ವೈಸರಾಯರನ್ನು ಕಾಣಲಿರುವಿರಿ. ವೈಸರಾಯರು ಇಷ್ಟರಲ್ಲೇ ಈ ಕುರಿತು ಬ್ರಿಟಿಷ್ ಸರಕಾರದೊಡನೆ ಅಭಿಪ್ರಾಯ ವಿನಿಮಯಮಾಡುತ್ತಿರುವರು. ಕೆಲವೇ ವಾರಗಳ ಹಿಂದೆ ಗಾಂಧಿಜಿಯವರ ಅನಾಯಕತ್ವವನ್ನೇ ಮೂಲೆಗೊತ್ತಿದ ರಾಜಾಜಿ ಮೊದಲಾದವರು ಈಗ ಪುನಃ ಅವರ ನಾಯಕತ್ವವನ್ನೇ ಒಪ್ಪಿ ನಡೆಯುವವರು. ಬ್ರಿಟಿಷ್ ಸರಕಾರಕ್ಕೆ ನಿಶ್ಶರ್ತವಾಗಿ ಸಹಾಯ ಮಾಡಬೇಕೆಂದು ಕೆಲವೇ ತಿಂಗಳಲ್ಲಿ ಅಭಿಪ್ರಾಯವಿತ್ತ ಮಹಾತ್ಮರು ಈಗ ಆ ಯುದ್ಧಕ್ಕೆ ಯಾವ ರೀತಿಯಲ್ಲಿಯೂ ಸಹಾಯ ಮಾಡಕೂಡದೆಂಬ ಪ್ರಚಾರ ಮಾಡುವ ಹಕ್ಕನ್ನೇ ಸ್ವರಾಜ್ಯಕ್ಕಿಂತಲೂ ಹೆಚ್ಚಿನದಾಗಿ ಮಾಡಿರುವರು. ಚಲಚಿತ್ರದ ದೃಶ್ಯಗಳಂತೆ ಮಾರ್ಪಾಟಹೊಂದುತ್ತಿವೆ ಕಾಂಗ್ರೆಸಿನ ಧೋರಣೆ. ಸಾಮಾನ್ಯರಿಗೆ ಅದರ ತಲೆಬುಡವೇ ಆಗುವಂತಿಲ್ಲ. ಹೇಗೂ ಇರಲಿ, ಇಂದೀಗ ಕಾಂಗ್ರೆಸಿನ ಡಿಕ್ಟೇಟರ್ ಮತ್ತು ಸೇನಾನಿಯಾಗಿದ್ದಾರೆ ಮಹಾತ್ಮರು. ಈ ಸಂಧಿಗ್ಧ ಕಾಲದಲ್ಲಿ ಬೇರೆ ವಿಚಾರವನ್ನೆಲ್ಲಾ ಒತ್ತಟ್ಟಿಗಿಟ್ಟು ಅವರು ಓರ್ಡರ್ ಕೊಟ್ಟ ಪ್ರಕಾರ ಮಾರ್ಚ್ ಬಿಟ್ಟರಾಯಿತು.

---

## ಹಿಟ್ಲರರ ದೆಸೆ ತಿರುಗಿದೆ

ಸೆಪ್ಟಂಬರ ಅಂತ್ಯದೊಳಗೂ ಹಿಟ್ಲರರಿಗೆ ಲಂಡನಿನ ಮೇಲೆ ಸ್ವಸ್ತಿಕಾ ಧ್ವಜಹಾರಿಸಲು ಸಾಧ್ಯವಾಗುವಹಾಗಿಲ್ಲ. ಹಿಂದೆ ಹಿಂದೆ ಹೋಗುತ್ತಿರುವ ಅವರ ಧಾಳಿ. ಈ ವರ್ಷದಲ್ಲೇ ಧಾಳಿಯು ನಡೆಸಲ್ಪಡುವುದೆಂಬ ಸುದ್ದಿಯುಂಟಾಗಿದೆ. ಗೋರಿಂಗರ ಪಡೆಯು ಲಂಡನಿಗೆ ಮಾಡಿದ ಭೀಷಣ ಹಾವಳಿಗೆ ಸರಿಯಾಗಿ ಪ್ರತೀಕಾರ ಮಾಡುತ್ತಿದ್ದಾರೆ ಬ್ರಿಟಿಷ್ ವೈಮಾನಿಕರು. ಇಷ್ಟರವರೆಗೆ ನೂರಕ್ಕಿಂತ ಮಿಕ್ಕಿತು ಲಂಡನಿನ ಮೇಲೆ ವಿಮಾನ ಧಾಳಿ. ಲಂಡನಿನ ಜನರೀಗ ಅದೃಷ್ಟ ವಾದಿಗಳಾಗಹತ್ತಿದ್ದಾರೆ. ಬಂದುದು ಬರಲೆಂದು ವಿಮಾನ ಧಾಳಿಗಳನ್ನೂ ಅಲಕ್ಷಿಸಿ ತಮ್ಮ ಕೆಲಸಗಳನ್ನು ಯಥಾಪ್ರಕಾರ ನಡಿಸ ಹತ್ತಿದ್ದಾರೆ. ಭಯಂಕರ ವಿಮಾನ ಧಾಳಿಯ ಪ್ರತಿಸ್ಪರ್ಧೆಯ ರೂಪದಲ್ಲೇ ಇನ್ನೂ ಕೆಲಕಾಲ ಯುದ್ಧ ನಡೆಯಲಿದೆ.

---

# ಈಗ ನನ್ನನ್ನು ಮದುವೆಯಾ - - - ಗುವಿರಾ?

ಕತೆಗಾರರು:
ಶ್ರೀ. ಕೆ. ಕೆ. ಶೆಟ್ಟಿ.

ಅಮ್ಮಾ, "ಹಾಗಾದರೆ ಪುರುಷರೆಲ್ಲರೂ ಕಾಮಾಂಧರೆ? ನನ್ನನ್ನು ಮದುವೆಯಾಗಿ, ನನಗೂ ಸುಖವಿತ್ತು ತಾನೂ ಸುಖಪಡುವ ಸುಮನಸ್ಸಿನ ಪುರುಷನೇ ಸಿಗಲಾರನೇ?" ಎಂದಳು ಲಲಿತ.

"ಮದುವೆಯಾಗಿ ಮರ್ಯಾದೆಯ ಜೀವನ ನಡೆಸುವವರು ನಮ್ಮ ಬಳಿದ ಸುಳಿಯಲಾರರು ಲಲಿತ" ಎಂದಳು ತಾಯಿ ಪದ್ಮಾವತಿ.



"ಲಲಿತ:- ಈಗ ನನ್ನನ್ನು ಮದುವೆಯಾಗುವಿರಾ?"

"ಮಗು, ನಿನಗೋಸ್ಕರವಾಗಿ ಒಬ್ಬನು ಕುತ್ತಿಗೆಗೆ ಹಗ್ಗ ಹಾಕಿಕೊಂಡು ಸತ್ತ. ಇನ್ನೊಬ್ಬ ನಮ್ಮ ಕಣ್ಣೆದುರಲ್ಲಿಯೇ ಉಪ್ಪರಿಗೆಯಿಂದ ಹಾರಿ ಮೃತನಾದ. ನಿನಗಾಗಿ ಪ್ರಾಣ ಕಳಕೊಳ್ಳಲಾದರೂ ಸಿದ್ಧರಿರುವರೇ ಹೊರತು ಯಾರೂ ನಿನ್ನನ್ನು ಮದುವೆಯಾಗಲೊಲ್ಲರು. ನಿನ್ನಿಂದವರು ಸುಖಪಡೆಯಲು ಹಾತೊರೆಯುವರೇ ಹೊರತು ನಿನ್ನ ಸುಖವ ಗೊಡವೆ ಒಬ್ಬರಿಗೂ ಇಲ್ಲ. ನಮ್ಮ ಬಳಿದ ಬರುವ ಕಾಮಾಂಧ ಗಂಡಸರ ರೀತಿಯಿದು. ಏನೇ ಆಗಲಿ. ಈ ನೀಚರ ಪಾಶಕ್ಕೆ ನೀನೆಂದಿಗೂ ಸಿಲುಕದಂತೆ ನೋಡಿಕೋ ಲಲಿತ. ನನ್ನೀ ಅವಸ್ಥೆಯನ್ನು ಸದಾ ಸ್ಮರಣೆಯಲ್ಲಿಟ್ಟುಕೋ! ನಿನಗಾಗಿ, ತುಚ್ಛ ಮಾನವನೊಬ್ಬನಿಂದ ವಂಚಿತೆಯಾಗಿ ನಾನೀ ಪಾಪಕೂಪಕ್ಕಿಳಿದೆ. ಆದರ ಫಲವನ್ನೀಗ ಎರಡೂ ಕೈಗಳಿಂದ ತಿನ್ನುತ್ತಿದ್ದೇನೆ ಮಗು! ನಾನೇ ತಿಂದು ಕೊನೆಗೊಂಡಿಲ್ಲ ನನ್ನ ಕರ್ಮದ ಫಲ. ನಿರ್ದೋಷಿಯೂ, ನಿರ್ಮಲೆಯೂ, ಸಚ್ಚರಿತೆಯೂ ಆದ ನೀನೂ ಅದರಲ್ಲಿ ಪಾಲುಪಡೆಯಬೇಕಾಗಿದೆ. ಅದೊಂದೇ ಇಂದು ನನ್ನ ಹೃದಯವನ್ನು ಸುಡುತ್ತಿರುವ ಕಿಚ್ಚು. ಇಲ್ಲವಾದರೆ ಸಂತೋಷದಿಂದ ಸಾವನ್ನು ಸ್ವಾಗತೀಕರಿಸಿ ಈ ಯಮಯಾತನೆಯಿಂದ ವಿಮುಕ್ತಳಾಗುತ್ತಿದ್ದೆ ಲಲಿತ!" ಎಂದು ಮೇಹವ್ಯಾಧಿ ಪೀಡಿತಳಾಗಿ ಮೈಯೆಲ್ಲಾ ಹುಣ್ಣುಗಳಿಂದ ತುಂಬಿ ಅಸಹನೀಯ ಪೀಡೆಗೊಳಗಾಗಿ ಹಾಸಿಗೆ ಹಿಡಿದಿದ್ದ ಪದ್ಮಾವತಿಯು ನಿಟ್ಟುಸಿರಿಟ್ಟಳು. ಆ ಮೇಲೆ, ಹತ್ತಿರವೇ ಕಣ್ಣೀರಿಳಿಸುತ್ತಾ ಕೂತು ಉಕ್ಕಿಬರುವ ದುಃಖವನ್ನು ಬಹಳ ಪ್ರಯತ್ನದಿಂದ ತಡಕೊಳ್ಳಲು ಬಾಯಿಗೆ ಸೆರಗನ್ನೊತ್ತಿ ಹಿಡಿದಿದ್ದ ಲಲಿತೆಯನ್ನು ಎವೆಯಿಕ್ಕದೆ ನೋಡಹತ್ತಿದಳು. ಅವಳ ಕಂಗಳಿಂದಲೂ ಕಣ್ಣೀರು ಬೊಟ್ಟಕ್ಕಿ ಹೊರಡಹತ್ತಿತು. ಹೀಗೆಯೇ ಸ್ವಲ್ಪ ಸಮಯ ಹೋಯಿತು.

"ಅಮ್ಮಾ, ಹಾಗಾದರೆ ಪುರುಷರೆಲ್ಲರೂ ಕಾಮಾಂಧರೇ? ನನ್ನನ್ನು ಮದು

ವೆಯಾಗಿ ನನಗೂ ಸುಖವಿತ್ತು. ತಾನೂ ಸುಖಪಡುವ ಸುಮನಸ್ಸಿನ ಪುರುಷನೆ ಸಿಗಲಾರನೇ?" ಎಂದಳು ಲಲಿತೆ ಮೌನದ ಅಸಹನೀಯ ಆವರಣವನ್ನೊಡೆದು.

"ನಮ್ಮ ಬಳಿಗೆ ಬರುವವರೆಲ್ಲಾ ನೀಚ ಕಾಮಾಂಧರು ಮಗು. ಮದುವೆಯಾಗಿ ಮರ್ಯಾದೆಯ ಜೀವನ ನಡಿಸುವವರು ನಮ್ಮ ಬಳಿ ಸುಳಿಯಲಾರರು" ಉತ್ತರವಿತ್ತಳು ಪದ್ಮಾವತಿ ತೀವ್ರನಿರಾಶೆಯ ಮುಖಭಾವದಿಂದ.


"ನಾನು ಪ್ರಾಣವನ್ನಾದರೂ ತ್ಯಾಗ ಮಾಡುವೆನೇ ಹೊರತು ಈ ದುರಾತ್ಮ ಮಾನವರ ಪಾಶವಿಕ ಕಾಮಾಂಧತೆಗೆ ಎಂದಿಗೂ ಬಲಿಯಾಗಲಾರೆನಮ್ಮಾ. ಈ ವಿಷಯದಲ್ಲಿ ನಿನಗೆ ಒಂದಿಷ್ಟಾದರೂ ಸಂದೇಹ ಬೇಡ" ಪದ್ಮಾವತಿಯ ಕೈ ಹಿಡಿದು ಭರವಸೆಯಿತ್ತಳು ಲಲಿತೆ.

ಅದೊಂದು ಬಗೆಯ ಅಂತಸ್ಸಮಾಧಾನದ ಪ್ರಕಾಶವು ಒಂದೊಮ್ಮೆ ಪದ್ಮಾವತಿಯ ಮುಖವನ್ನು ಕಳೆದುಂಬಿಸಿತು. ಉತ್ತರಕ್ಷಣದಲ್ಲಿಯೇ ಪುನಃ ಅವಳ ಮುಖವು ಯಥಾ ಪ್ರಕಾರ ಕಪ್ಪೇರಿತು. "ಆಹ! ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿ ಕೆಟ್ಟೆ ಮಗು! ನಾನು ಸತ್ತ ಮೇಲೆ ನೀನು ಎಂತಹ ಕಷ್ಟಕ್ಕೊಳಗಾಗುವೆಯೊ?" ಎಂದವಳು ಉದ್ಗಾರವೆತ್ತಿದಳು. ತನ್ನಾಶ್ರಯ ತಪ್ಪಿದ ಮೇಲೆ ಲಲಿತೆಯು ಎಂತಹ ವಿಪತ್ತಿಗೊಳಗಾಗುವಳೊ ಎಂದು ಕಾತರಗೊಂಡಿದ್ದಳವಳು.

"ಅಮ್ಮಾ ಆ ಕುರಿತು ನೀನು ಚಿಂತಿಸುವ ಆವಶ್ಯಕತೆಯಾದರೂ ಏನು? ನೀನು ನನಗೇನು ಕಡಿಮೆಮಾಡಿರುವೆ? ನೀನು ಎಂತಹ ಕಷ್ಟಕ್ಕೀಡಾಗಿಯಾದರೂ ನಾನು ಸುಖವಾಗಿರುವಂತೆ ಹಣ ಸಂಪಾದಿಸಿಟ್ಟಿರುವೆ. ಪುತ್ರಿಯ ಪ್ರೇಮ ವೇದಿಕೆಯಲ್ಲಿ ಪ್ರಾಣ ಬಲಿದಾನವಿತ್ತಿರುವೆ. ಜನ್ಮಜನ್ಮಾಂತರಕ್ಕೂ ತೀರಿಸಲಾರದ ಋಣದಿಂದ ನನ್ನನ್ನು ಬದ್ಧಳನ್ನಾಗಿ ಮಾಡಿ ಇಂದೀಗ ನನ್ನನ್ನಗಲಿ ಹೋಗಲು ಸಿದ್ಧಳಾಗಿರುವಾಗ ಮತ್ತೂ ಮತ್ತೂ ನನ್ನ ಮುಂದಿನ ಸುಖದ ಕುರಿತು ಚಿಂತಿಸುತ್ತಿರುವೆ. ನಿನ್ನಂತಹ ತಾಯಿಯ ಉದರದಲ್ಲಿ ಹುಟ್ಟಿದುದಕ್ಕಾಗಿ ಹೆಮ್ಮೆ ಪಡುವೆನಮ್ಮ ನಾನು. ಅದು ನನ್ನ ಪೂರ್ವ ಪುಣ್ಯದ ಫಲವೆಂದು ಭಾವಿಸುವೆನು. ಆದರೆ . ." ಒಮ್ಮೆಯೇ ಏರಿಬಂದ ದುಃಖದಿಂದ ಲಲಿತೆಯು ಕುತ್ತಿಗೆಯ ನರಗಳು ಬಿಗಿದು ಮಾತಾಡಲಾರದೆ ಸಂತತಧಾರೆಯಾಗಿ ಕಣ್ಣೀರಿಟ್ಟಳು. ಪದ್ಮಾವತಿಯ ಮುಖವು ಪುನಃ ಅದಾವುದೋ ಒಂದು ಪ್ರಕಾಶದಿಂದ ಬೆಳಗಿತು. ಅವಳು ತನ್ನ ಅವಸ್ಥೆಯನ್ನು ಮರೆತು ಲಲಿತೆಯನ್ನು ಸಮಾಧಾನ ಪಡಿಸಲು ಆತುರಗೊಂಡು ಅದಾವ ಶಕ್ತಿಯಿಂದಲೋ ಹಾಸಿಗೆಯಿಂದ ಛಕ್ಕನೆ ಎದ್ದು ಕೂತುಕೊಂಡಳು. "ಅಮ್ಮಾ ಇದೇನು ಮಾಡುವೆ?" ಎಂದು ಲಲಿತೆಯು ಸಖೇದ ವಿಸ್ಮಯಗೊಂಡು ಹಾರಿ ಹೋಗಿ ಪದ್ಮಾವತಿಯನ್ನು ಹಿಡಿದುಕೊಂಡಳು. ಪದ್ಮಾವತಿಯು ಎವೆಯಿಕ್ಕದೆ ಮಗಳನ್ನೇ ನೋಡಿದಳು. ಲಲಿತೆಯೂ ನಟ್ಟದೃಷ್ಟಿಯಿಂದ ತಾಯಿಯನ್ನೇ ನೋಡಿದಳು. ಎರಡೂ ದೃಷ್ಟಿಗಳು ಒಂದುಗೂಡಿ ಪರಸ್ಪರ ಲೀನವಾದುವು. "ಎಂತಹ ತ್ಯಾಗಮೂರ್ತಿ ತಾಯಿ!" ಎಂಬ ಮೌನೋದ್ಗಾರವು ಲಲಿತೆಯ ಮುಖಭಾವದಿಂದ ಹೊರಟು ವಿಶ್ವಭಾವದೊಂದಿಗೆ ಬೆರೆಯಿತು. ಜೀವದುಸಿರೊಂದು ವಿಶ್ವದುಸಿರೊಂದಿಗೆ ಸೇರಿತು.

೦ ೦ ೦

"ಲಲಿತ, ನಿನಗಾಗಿ ನಾನು ಏನು ಮಾಡುವುದಕ್ಕೂ ಸಿದ್ಧನು. ನನ್ನನ್ನೇ



ಕೆ ಸೂಜಿಮೊನೆಯ ಮೇಲೆ ನಿಲ್ಲಿಸಿ ಹಿಂಸಿಸುತ್ತಿರುವೆ? ನಿನಗೊಂದಿಷ್ಟು ಕರುಣೆಯಿಲ್ಲವೇ? ನೀನು ನನ್ನವಳಾಗದಿದ್ದರೆ ನಿಶ್ಚಯವಾಗಿಯೂ ನಾನು ಬಾಳಲಾರೆ ಲಲಿತ! ನಿನ್ನಿಚ್ಛೆಯೇನೆಂದು ಮನಬಿಚ್ಚಿ ತಿಳಿಸು. ಅದನ್ನು ನೆರವೇರಿಸುವ ಜವಾಬ್ದಾರಿ ನನ್ನದು. ಇಂದು ನಾನು ಎಂದಿನಂತೆ ಬಂದ ಹಾಗೆ ಹಿಂದೆ ಹೋಗಲಾರೆ. ನಿನ್ನ ಮನೆ ಬಾಗಿಲಲ್ಲಿಯೇ ಉಪವಾಸ ಬಿದ್ದು ಸತ್ತರೂ ಸರಿಯೇ" ಎಂದು ಕಾಮೋದ್ವೇಗದಿಂದ ರತ್ನಾಕರನು, ಮನೆಬಾಗಿಲಲ್ಲಿ ಭಿಕ್ಷೆಗಾಗಿ ಬಂದು ನಿಂತಿರುವ ಭಿಕ್ಷುಕನಂತೆ ಅತ್ಯಂತ ದೈನ್ಯಪರ ಮುಖಮುದ್ರೆಯಿಂದ ಲಲಿತೆಯನ್ನೇ ನೋಡತೊಡಗಿದನು. ಅವನ ಕೂದಲೆಲ್ಲಾ ಕೆದರಿಹೋಗಿತ್ತು. ಕಂಗಳು ಕೆಂಪಡರಿದ್ದುವು. ಮುಖವು ವಿವರ್ಣವಾಗಿ ಹೋಗಿತ್ತು. ಅಂಗಾಂಗಗಳೆಲ್ಲಾ ಕಂಪಿಸುತ್ತಿದ್ದುವು.

ಲಲಿತ–"ನೀವು ನನ್ನನ್ನು ಬಹಳವಾಗಿ ಪ್ರೀತಿಸುವಿರೇ?"

ರತ್ನಾಕರ- "ಪ್ರಾಣಕ್ಕಿಂತಲೂ ಹೆಚ್ಚಾಗಿ."

ಲಲಿತ- "ನನ್ನೀ ಹೊರಗಣ ರೂಪವನ್ನು ಮೋಹಿಸುವುದಲ್ಲವೇ?"

ರತ್ನಾಕರ- "ರೂಪ ಮಾತ್ರವಲ್ಲ ಲಲಿತ. ನಿನ್ನ ಗುಣಕ್ಕೂ ಮೆಚ್ಚಿಹೋಗಿರುವೆನು. ನನ್ನಾತ್ಮವೇ ನಿನ್ನಾತ್ಮದೊಂದಿಗೆ ಒಂದುಗೂಡಲು ಹಾತೊರೆಯುತ್ತಿರುವುದು."

ಲಲಿತ- "ಹಾಗಾದರೆ ನೀವು ನನ್ನನ್ನು ಖಂಡಿತವಾಗಿಯೂ ಮದುವೆಯಾಗುವಿರಾ?"

ರತ್ನಾಕರ– "ಅದೇ ಪ್ರಶ್ನೆಯನ್ನು ಮತ್ತೂ ಮತ್ತೂ ಯಾಕೆ ಕೇಳುತ್ತಿರುವೆ ಲಲಿತ? ನಿನಗಾಗಿ ನಾನು ಪ್ರಾಣವನ್ನೀಯುವುದಕ್ಕೂ ಸಿದ್ಧನೆಂದ ಮೇಲೆ ಮದುವೆ ಮಾಡಿಕೊಳ್ಳಲು ಹಿಂದೆಗೆಯುವೆನೆ?"

ಲಲಿತ–"ನಿಮ್ಮ ಮೊದಲಿನ ಹೆಂಡತಿ ಮಕ್ಕಳನ್ನೇನು ಮಾಡುವಿರಿ?"

ರತ್ನಾಕರ– "ನಾನು ನಿನ್ನನ್ನು ಮದುವೆಯಾದೆನೆಂದರೆ ಜಾತಿ ಬಹಿಷ್ಕೃತನಾಗುವೆನು. ಆಗ ಅವಳ ದಾರಿ ಅವಳು ನೋಡಿಕೊಳ್ಳಲೇಬೇಕಾಗುವುದು. ಅವಳನ್ನು ನಾನು ದ್ವೇಷಿಸುವೆನು ಲಲಿತ."

ಲಲಿತ–"ನಿಮ್ಮ ಹೆಂಡತಿ ಮಕ್ಕಳ ಮುಂದಿನ ಗತಿಯೇನ?"

ರತ್ನಾಕರ– "ಅವಳ ತಂದೆ ಶ್ರೀಮಂತರಿದ್ದಾರೆ ಲಲಿತ. ಅವಳೊಂದಿಗೆ ನಾನು ಒಂದು ದಿನವೂ ಸುಖದಿಂದಿರಲಿಲ್ಲ. ಮದುವೆಯಾದ ಕರ್ಮಕ್ಕಾಗಿ ಹೇಗಾದರೂ ದಿನ ದೂಡುತ್ತಿದ್ದೆ ಈವರೆಗೆ."

ಲಲಿತ- "ಒಂದಲ್ಲನಾಲ್ಕು ಮಕ್ಕಳನ್ನು ಹುಟ್ಟಿಸಿ ಈಗ ಅವರನ್ನು ಅವರ ಪಾಡಿಗೆ ಬಿಡುವಿರಾ?"

ರತ್ನಾಕರ- "ಮತ್ತೆ ನಾನೇನು ಮಾಡಲಿ ಲಲಿತ? ಕುತ್ತಿಗೆಗೊಂದು ಕೊರಡನ್ನು ಕಟ್ಟಿಕೊಂಡು ಎಷ್ಟು ಕಾಲ ಜೀವನ ಕಳೆಯಲಿ! ನೀನು ನನ್ನ ಪ್ರಾಣದ ಪ್ರಾಣವಾಗಿರುವಾಗ ನನಗೂ ಅವಳಿಗೂ ಸಾಮರಸ್ಯವುಂಟಾಗುವುದಾದರೂ ಹೇಗೆ? ಸಾಮರಸ್ಯವಿಲ್ಲದ ದಾಂಪತ್ಯದಿಂದ ಪ್ರಯೋಜನವೇನು ಲಲಿತ? ಅವಳಿಗೂ ಸುಖವಿಲ್ಲ; ನನಗೂ ಶಾಂತಿಯಿಲ್ಲ"

ಲಲಿತೆಯು ತುಸು ಹೊತ್ತು ಸುಮ್ಮನಿದ್ದಳು. ಅವಳ ಕಂಗಳಲ್ಲಿ ಅದೇಕೋ ನೀರು ತುಂಬಿ ಬಂತು. ಅದೇನೊ ಚಿಂತೆಯಿಂದ ಅವಳ ಹೃದಯವು ತಲ್ಲಣಗೊಂಡಿತು. ರತ್ನಾಕರನು ಅವಳನ್ನು ಎಷ್ಟುಮಾತ್ರಕ್ಕೂ ಸುಮ್ಮನಿರಬಿಡಲಾರ. ವಸುಪುರದಲ್ಲಿ ಅವನು ಒಳ್ಳೇ ಪ್ರಭಾವಶಾಲಿ ವ್ಯಕ್ತಿ. ಬೇಕಷ್ಟು ಹಣ ಮತ್ತು ಜನಸಹಾಯವಿದ್ದವ. ಲಲಿತೆಗೆ ರತ್ನಾಕರನಂತಹ ಕಾಮಾಂಧರ ಕಾಟವು ಅಸಹನೀಯವಾಗಿದ್ದಿತು. ಜೀವನದಲ್ಲೀ ಜಿಗುಪ್ಸೆಯುಂಟಾಗಿತ್ತು. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಅವಳು ಸಿದ್ಧಳೇ ಇದ್ದಳು. ಆದರೆ ಅದನ್ನೆಂದೂ ಮಾಡದನೆಂದು ತಾಯಿಗೆ ಭಾಷೆಕೊಟ್ಟಿದ್ದಳು. ಅದರಿಂದ ತಾಯಿಯ ಆತ್ಮಕ್ಕೆ ಅಸಮಾಧಾನವಾಗುವುದೆಂದು ಹಿಂಜರಿಯುತ್ತಿದ್ದಳು. ಮದುವೆಯಾಗದೆ ತಾನು ಯಾರವಳೂ ಆಗಲಾರೆನೆಂದು ಛಲ ಹಿಡಿದು ತನ್ನ ಬಳಿಗೆ ಬಂದ ಕಾಮುಕರನ್ನೆಲ್ಲಾ ಹಿಂದೆ ಕಳುಹಿಸುತ್ತಿದ್ದಳು. ಆದರೆ ರತ್ನಾಕರನು ತನ್ನ ಕಾಮಲಾಲಸೆಯ ತೃಪ್ತಿಗಾಗಿ ಏನು ಮಾಡುವು

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

**ಅಶ್ವಗಂಧಾಹಾರ** (ಕಾಫಿ, ಟೀಗಳಿಗೆ ಬದಲಾಗಿ ಉಪಯೋಗಿಸಬಹುದು.)

ಪ್ರಾತಃಕಾಲದಲ್ಲಿ ಹಾಲಿನಲ್ಲಿ ಸೇವಿಸುತ್ತಾ ಬಂದರೆ ನರಗಳಿಗೆ ವಿಶೇಷ ಶಕ್ತಿಯೂ, ಧಾತುವೃದ್ಧಿಯೂ ಆಗುತ್ತದೆ. ಕ್ಷೀಣವಾಗಿರುವ ಮಕ್ಕಳಿಗೆ ಹಾಲಿನಲ್ಲಿ ಕೊಡುತ್ತಾ ಬಂದಲ್ಲಿ ಶರೀರ ಪುಷ್ಟಿಯನ್ನುಂಟುಮಾಡುತ್ತದೆ.

ಕೆಟಲಾಗು ಕೇಳಿರಿ. ಬೆಲೆ. ೬ ಔನ್ಸು ೦—೧೨—೦

**ಸದ್ವೈದ್ಯಶಾಲಾ—ನಂಜನಗೂಡು**

**ಬ್ರಾಂಚು—ರಥಬೀದಿ, ಮಂಗಳೂರು.**

ದಕ್ಕೊ ಹೇಸುವವನಲ್ಲ. ತನ್ನ ನಿರ್ದೋಷಿ ಹೆಂಡತಿ ಮಕ್ಕಳನ್ನು ತ್ಯಜಿಸಿಬಿಟ್ಟು, ಸಮಾಜವನ್ನು ಧಿಕ್ಕರಿಸಿ ಮರ್ಯಾದೆ ಬಿಟ್ಟು ಲಲಿತೆಯನ್ನು ಮದುವೆಯಾಗಲು ಮುಂದಾಗಿರುವನು. ಸರ್ವಸಾಮಾನ್ಯ ಕಾಮುಕಿಗಳಿಗಿಂತಲೂ ನೀಚನಾತನು, ತನ್ನ ಕಾಮಲಾಲಸೆಗಾಗಿ ಹೆಂಡತಿ ಮಕ್ಕಳನ್ನು ಬಲಿಕೊಡಲು ಹೊರಟವನು. ಲಲಿತೆಗೆ ಫಕ್ಕನೆ ಅದೇನೋ ಯೋಚನೆಯೊಂದು ಹೊಳೆಯಿತು. ಅವಳೊಮ್ಮೆ ಅದೇಕೋ ಔಡುಗಚ್ಚಿದಳು. ಕಂಗಳು ಕ್ರೂರವಾದುವು. ಮುಖವು ಕಪ್ಪೇರಿ ಕಠಿಣಭಾವ ತಾಳಿತು.

ಲಲಿತ:- "ಖಂಡಿತವಾಗಿಯೂ ನೀವು ನನ್ನ ರೂಪಕ್ಕೆ ಮರುಳಾಗದೆ ನನ್ನ ಮೇಲೆ ನಿಜವಾದ ಪ್ರೇಮವುಳ್ಳವರಿರುವಿರಲ್ಲವೇ?"

ರತ್ನಾಕರ:- "ನನ್ನ ಹೃದಯವನ್ನು ತೆರೆದು ತೋರಿಸಲು ಸಾಧ್ಯವಿದ್ದರೆ ಅದನ್ನು ಖಚಿತಗೊಳಿಸುತ್ತಿದ್ದೆ ಲಲಿತೆ ನೀನೇ ನನ್ನ ಪ್ರಾಣಾಧಿಕೆಯೆಂಬುದನ್ನು."

ಲಲಿತ:- "ಹಾಗಾದರೆ ನನ್ನ ರೂಪ ಹೇಗಿದ್ದರೂ ನಿಮ್ಮ ಪ್ರೀತಿಗೆ ಬಾಧಕ ಬಾರದಲ್ಲವೇ?"

ರತ್ನಾಕರ:- "ರೂಪವೆಂದರೆ ಹೊರಗಣ ಗಿಲಿಟು; ಗುಣವೇ ನಿಜವಾದ ಪುತ್ಥಳಿ ಚಿನ್ನ. ಗಿಲಿಟಿಗೆ ಮರುಳಾಗುವವರು ಭ್ರಾಂತರಲ್ಲವೇ ಲಲಿತ? ನನ್ನ ಹೆಂಡತಿಯೇನು ಸುರೂಪಿಯುಲ್ಲವೇ? ಅವಳು ಗುಣವಂತಳಲ್ಲೆಂದು ಮಾತ್ರ ನಾನು ಜಿಗುಪ್ಸೆಗೊಂಡಿರುವುದು."

ಲಲಿತ:- "ಹಾಗಾದರೆ ನಾಳೆ ಬೆಳಿಗ್ಗೆ ಬನ್ನಿ ನಿಮ್ಮ ಇಷ್ಟಮಿತ್ರರೊಂದಿಗೆ ಮದುವೆ ನಿಶ್ಚಯಕ್ಕೆ. ನಾನೂ ನನ್ನ ಕೆಲಮಂದಿ ಸಂಬಂಧಿಕರನ್ನು ಕರೆಸುವೆನು."

ರತ್ನಾಕರ:- (ಆನಂದತುಂದಿಲಾಂತರಂಗನಾಗಿ ಲಲಿತೆಯ ಕೈಯನ್ನು ಗಟ್ಟಿಯಾಗಿ ಹಿಡಿದು) "ನಾನಿನ್ನು ಧನ್ಯನಾದೆ ಲಲಿತ! ನನ್ನ ಸುಖಕ್ಕಿನ್ನು ಪಾರವಿಲ್ಲ. ನನ್ನ ಭಾಗ್ಯೋದಯ....


ಲಲಿತ- (ನಿಷ್ಠುರ ಮುಖಮುದ್ರೆಯಿಂದ ಕೈಯನ್ನೆಳೆದು ಬಿಡಿಸಿ) ತಡೆಯಿರಿ, ಅಷ್ಟೊಂದು ಅವಸರಗೊಳ್ಳಬೇಡಿ. ಕೈಗೆ ಬಂದ ತುತ್ತು ಬಾಯಿಗೆ ಬಾರದೆ ಹೋಗಬಹುದು. ಯಾವುದಕ್ಕೂ ನಾಳೆ ಬೆಳಿಗ್ಗೆ ಬನ್ನಿ. (ಎಂದು ರತ್ನಾಕರನನ್ನೊಮ್ಮೆ ದಿಟ್ಟಿಸಿ ನೋಡಿ ಒಳಗೆ ಹೋಗಿ ಬಿಟ್ಟಳು.) ರತ್ನಾಕರನ ಉತ್ಸಾಹಕ್ಕೆ ಒಂದೊಮ್ಮೆ ಹಠಾತ್ತಾಗಿ ತಣ್ಣೀರೆರೆದಂತಾಯಿತು. ಮರುಕ್ಷಣದಲ್ಲೇ ಅವನು ಉತ್ಸಾಹ

(೨೫ನೆ ಪುಟ ನೋಡಿರಿ)


WHEN IN BOMBAY STAY AT

# SHARADA BHAVAN

[HIGH CLASS VEGETARIAN BOARDING & LODGING]



Opp. G. I. P. Ry. STATION.

**MATUNGA**

**BOMBAY 19.**

OFFERS ALL CONVENIENCES
AMIDST A HOMELY ATMOSPHERE
AT MODERATE TERMS

ಬೊಂಬೈಯಲ್ಲಿ ಶ್ರೇಷ್ಠ ವರ್ಗದ
ವಸತಿ ಗೃಹ

# ಶಾರದಾ ಭವನ

ಊಟ ವಸತಿಗಳ ಸರ್ವ ಆಧುನಿಕ ಸೌಕರ್ಯಗಳಿಂದ ಕೂಡಿದ ಹೋಟೆಲ್

**B. RAGHAVENDRA RAO,**
*PROPRIETOR.*

# ಮುತ್ತು ಕೊಡುವುದು ಮೃತ್ಯುವನ್ನು : : ಆಮಂತ್ರಿಸಿದಂತೆ !



## ಮುತ್ತು ಕೊಟ್ಟು ಮೂರ್ಖರಾದೀರಿ !

### ಚುಂಬನವೇ ಕ್ಷಯರೋಗದ ಮೂಲ !

★

ನ್ಯೂಯಾರ್ಕಿನ ಕ್ಷಯರೋಗ ಅಸೋಸಿಯೇಷನ್ನಿನ ಸುಪ್ರಸಿದ್ಧ ಡಾಕ್ಟರಾದ ಮಿ. ಬಾಸಿಲ್, ಜಿ, ಯೂಜ್ ರವರು ಮುತ್ತುಕೊಡುವ ಪದ್ಧತಿಯನ್ನು ನಿಲ್ಲಿಸಲು ಒಂದು ಚಳವಳವನ್ನು ಪ್ರಾರಂಭಿಸಬೇಕೆಂದು ಹೇಳಿದ್ದಾರೆ. ಇದರ ವಿಚಾರವಾಗಿ ತಮ್ಮ ಅನುಭವದಲ್ಲಿ ಕಂಡ ಅನೇಕ ಉದಾಹರಣೆಗಳನ್ನು ಮುಂದಿಡುತ್ತಾ, ಈ ಡಾಕ್ಟರರು ಈ ರೀತಿ ಹೇಳಿದ್ದಾರೆ:– ಮುತ್ತು ಕೊಡುವುದನ್ನು ತಕ್ಷಣ ನಿಲ್ಲಿಸಿಬಿಡಿ. ಇದರಿಂದ ಕ್ಷಯರೋಗದಿಂದ ಸಾಯುವವರ ಸಂಖ್ಯೆಯು ನಿಜವಾಗಿಯೂ ಕಡಿಮೆಯಾಗುವುದು. ಈ ಭಯಂಕರ ರೋಗವು ಈ ದುಷ್ಟ ಪದ್ಧತಿಯಿಂದಲೇ ವಿಶೇಷವಾಗಿ ಹರಡುತ್ತಿದೆ, ಪ್ರತಿ ವರ್ಷವೂ ಸಾವಿರಾರು ಪ್ರಾಣಗಳು ಇದಕ್ಕೆ ಆಹುತಿಯಾಗುತ್ತಿವೆ. ಕೋಟ್ಯಾಂತರ ಪೌಂಡುಗಳು ಇದರ ಚಿಕಿತ್ಸೆಗಾಗಿ ವೆಚ್ಚವಾಗುತ್ತಿವೆ. 10 ವರ್ಷಗಳವರೆಗೆ ಎಲ್ಲರೂ ಚುಂಬಿಸುವುದನ್ನು ಬಿಟ್ಟುಬಿಟ್ಟಲ್ಲಿ, ತಾಯಂದಿರು ತಮ್ಮ ಮಕ್ಕಳನ್ನೂ ಮುದ್ದಿಸದೆ ಇದ್ದಲ್ಲಿ, ಪ್ರಣಯಿಗಳು ಪ್ರೇಯಸಿಯ ಚೆಂದುಟಿಗಳಿಂದ ತಮ್ಮ ತುಟಿಗಳನ್ನು ದೂರವಾಗಿಟ್ಟಲ್ಲಿ, ನಿಮ್ಮ ಮನಸ್ಸನ್ನೂ ನಿಮ್ಮ ಹಿತದಲ್ಲಿಟ್ಟುಕೊಂಡಿದ್ದಲ್ಲಿ ಈ ರೋಗವು ನಿರ್ನಾಮವಾಗುವುದು.

**ಮುದ್ದಿಸುವ ವಯಸ್ಸು**

ಈ ರೋಗವು ಮುದ್ದಿಸುವುದರಿಂದಲೇ ಹರಡುವುದೆಂದೂ, 18ರಿಂದ 40 ವರ್ಷ ವಯಸ್ಸಿನವರಲ್ಲಿ ಅದು ಹೆಚ್ಚಾಗಿ ಕಂಡುಬರುತ್ತಿದೆಯೆಂದೂ ಮೇಲ್ಕಂಡ ವೈದ್ಯರು ಅಭಿಪ್ರಾಯಪಡುತ್ತಾರೆ. ಪ್ರತಿಯೊಂದು ಚುಂಬನದೊಡನೆಯೂ ಸಾವಿರಾರು ಸಣ್ಣ ಕ್ರಿಮಿಗಳು ಒಂದು ಬಾಯಿಂದ ಮತ್ತೊಂದಕ್ಕೆ ಹೋಗುತ್ತವೆ. ಇದರಿಂದ ಅನೇಕ ಸಾಂಕ್ರಾಮಿಕ ರೋಗಗಳು ಒಬ್ಬರಿಂದೊಬ್ಬರಿಗೆ ತಗುಲುವುವು. ಚುಂಬನದಂತಹ ಕೆಟ್ಟ ಪದ್ಧತಿಯು ಬೇರೊಂದಿಲ್ಲವೆನ್ನಬಹುದು.


ವಿದ್ಯೆದತಾದಿ

ಹಳ್ಳಿಯ ಟೊಳ್ಳು ಜೀವನವನ್ನು ಮನಸ್ಸಿಗೆ ನಾಟುವಂತೆ ಚಿತ್ರಿಸಿದ

ತುಳು ನಾಟಕ

ಬೆಲೆ: ೦–೬–೦

ತುಳುನಾಡ್ ಪ್ರೆಸ್

ಉಡುಪಿ.


**ಯುವತಿಯರಿಗೆ ಎಚ್ಚರಿಕೆ !**

ಯಂಗ್ ವಿಮೆನ್ಸ್ ಕ್ರಿಶ್ಚಿಯನ್ ಅಸೋಸಿಯೇಷನಿನವರು ಕುಮಾರಿಯರಿಗೆ ಬಹಳ ತೀಕ್ಷ್ಣವಾದ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. "ನೆನಪಿಡಿರಿ. ನೀವು ಯಾರೊಡನೆ ನರ್ತಿಸುವಿರೋ ಅವರಿಂದ ನಿಮಗೆ ಈ ರೋಗಗಳುಂಟಾಗುತ್ತವೆ. ನೀವು ಚುಂಬಿಸುವದರಿಂದ ನಿಮ್ಮನ್ನೂ ಚುಂಬಿಸುವವರಿಂದ, ನಿಮಗೆ ಈ ರೋಗಗಳುಂಟಾಗುತ್ತವೆ. ನೀವು ಪ್ರೀತಿಸುವ ಗಂಡಸರ ಪೈಕಿ ಸೇ. 25 ಮಂದಿಗೆ ರೋಗವಿದೆಯೆಂಬುದನ್ನು ನೆನಪಿಡಿರಿ."

**ಕಾನೂನು**

ಕೆಲವು ವರ್ಷಗಳ ಹಿಂದೆ ಕೆಲವು ಡಾಕ್ಟರುಗಳು ಚುಂಬಿಸುವ ಅಭ್ಯಾಸವನ್ನು ತಡೆಗಟ್ಟಲು ಒಂದು ಬಿಲ್ ತಯಾರಿಸಿದ್ದರು. ಆರೋಗ್ಯದ ದೃಷ್ಟಿಯಿಂದ ಮುತ್ತುಕೊಡುವುದು ಕೆಟ್ಟದೆಂದು ಇವರು ಸಿದ್ಧಮಾಡಿ ತೋರಿಸಿ

ವ್ವರು. ನಿನ್ನೆ ಮೊನ್ನೆಯ ಮಾತು, ಸುಪ್ರಸಿದ್ಧ ಡಾಕ್ಟರ್ ಆದ ಎಲಿಜಬೆತ್ ಸ್ಲೋನ್‌ಚೇರ್ ಎಂಬವರು ತಾಯಂದಿರಿಗೆ ಈ ರೀತಿ ಎಚ್ಚರಿಕೆಯಿತ್ತಿದ್ದರು. “ಮಕ್ಕಳನ್ನು ಮುದ್ದಿಸಬೇಡಿ. ಡಿಫ್ತೀರಿಯ ಎಂಬ ರೋಗವು ಇದರಿಂದ ಮಕ್ಕಳಿಗೆ ತಗಲುತ್ತದೆ. ಮುತ್ತುಕೊಡುವುದು ಮೃತ್ಯುವಿಗೆ ಆಮಂತ್ರಣವಿತ್ತಂತೆ? ಸರ್ವ ಜನಪ್ರಿಯಳಾಗಿದ್ದ ರಾಜಕುಮಾರಿ ಅಲಾಯಿಸಳಿಗೆ ಈ ದುಷ್ಟಪದ್ಧತಿಯ ಪರಿಣಾಮವಾಗಿ, ತನ್ನ ಮಕ್ಕಳಿಂದಲೇ ‘ಡಿಫ್ತೀರಿಯ’ (ಕಂಠರೋಗ) ವುಂಟಾಗಿ, ಆಕೆಯು ಅದರಿಂದಲೇ ಮರಣಹೊಂದಿದಳು.

**ನನಗೆ ಮುತ್ತು ಕೊಡಬೇಡಿ**

ಇಂದಿಗೆ ಇಪ್ಪತ್ತು ವರ್ಷಗಳಿಗೆ ಮುಂಚೆ, ವಾಷಿಂಗ್‌ಟನ್ನಿನಲ್ಲಿ “ಕ್ರಿಮಿನಾಶಕ” ಚಳವಳಿಯು ಆರಂಭವಾಗಿತ್ತು. ಆಗ ಸಣ್ಣ ಸಣ್ಣ ಮಕ್ಕಳ ಕೊರಳುಗಳಲ್ಲಿ ಸಣ್ಣ ಹಲಗೆಗಳನ್ನು ನೇತುಹಾಕಿ, ಅವುಗಳ ಮೇಲೆ “ನನಗೆ ಮುತ್ತು ಕೊಡಬೇಡಿ” ಎಂದು ದಪ್ಪವಾದ ಅಕ್ಷರಗಳಲ್ಲಿ ಬರೆದಿರುತ್ತಿದ್ದರು. ಇಂತಹ ಮಕ್ಕಳು ಬೀದಿಗಳಲ್ಲಿ ತಿರುಗುತ್ತಿದ್ದುದು ಆಗಿನ ಕಾಲದಲ್ಲಿ ಸಾಮಾನ್ಯವಾಗಿದ್ದಿತು.

**ಹೃದಯದ ಮೇಲೆ ಪರಿಣಾಮ**

ಡಾಕ್ಟರ್ ಆಮ್‌ಸ್ಟರ್ಡ್ಯಾಯಂಗರು ಸಹ ಚುಂಬನದಿಂದಾಗುವ ಹಾನಿಗಳನ್ನು ವಿವರಿಸಿದ್ದಾರೆ. ಚುಂಬನದ ಪರಿಣಾಮವು ಹೃದಯದ ಮೇಲೆ ಸಹ ಆಗುವುದೆಂದು ಇವರ ಮತ. ಈ ಪದ್ಧತಿಯು ಜಗತ್ತಿನಿಂದ ಸಂಪೂರ್ಣವಾಗಿ ಅಳಿಸಿಹೋಗಲೆಂದೇ ಇವರಅಭಿಪ್ರಾಯ ಹಾಗೂ ಪ್ರಾರ್ಥನೆ. ಆದರೆ ಇದು ಪೂರ್ತಿಯಾಗಿ ಸಾಧ್ಯವಿಲ್ಲವಾದ್ದರಿಂದ ಕೊನೆ ಪಕ್ಷ ಹಗಲಲ್ಲಾದರೂ, ಹೆಚ್ಚು ಸಾರಿ ಚುಂಬಿಸದಿರಬೇಕೆಂದು ಇವರು ಸೂಚಿಸಿದ್ದಾರೆ.

**ವಿಚಿತ್ರ ಸ್ತ್ರೀ**

ಅಮೆರಿಕದ ಒಬ್ಬ ಸ್ತ್ರೀಯು ಎಂದೆಂದಿಗೂ ತನ್ನ ಮಕ್ಕಳನ್ನಾಗಲಿ, ಪತಿಯನ್ನಾಗಲಿ ಚುಂಬಿಸಿಯೇ ಇಲ್ಲವಂತೆ. ಏಕೆಂದರೆ ಆಕೆಯ ತಾಯಿತಂದೆಗಳು ಬಾಲ್ಯದಲ್ಲಿಯೇ ಅದರ ದುಷ್ಪರಿಣಾಮಗಳನ್ನು ತಿಳಿಸಿದ್ದಾರಂತೆ.

**ಮುತ್ತಿಗೆ ಉತ್ತರ**

ನ್ಯೂಯೋರ್ಕ್, ಪ್ಯಾರಿಸ್, ವಿಯನ್ನಗಳಲ್ಲಿ ಸಹ ಚುಂಬನ ವಿರೋಧಿ

(೨೩ನೇ ಪುಟ ನೋಡಿ)


# PIGMY DEPOSIT

**INTERESTING FEATURES.**

1. Deposit collected at your door.
2. The minimum deposit payable at a time is only two annas.
3. One rupee paid everyday will get you with interest Rs. 2,800/- in seven years.
4. Any smaller amount can be paid and that too as and when one whishes.
5. Payment can be even discontinued and again continued when convenient.
6. No forfeiture of principal or interest for discontinuance.
7. Any sum of two annas or more can be paid at any time and whatever amount that is at credit of each deposit from time to time carries interest.

One does not feel when one is paying, but is agreebly surprised that what one has paid has grown into a fortune. Truly, little drops make the mighty ocean.


The Syndicate originated his novel plan more than eleven years ago. The thousands who have adopted it and the many that have admired it bear out standing evidence of what provision one can do for the evening of ones life.

Apply for further particulars to:—

**THE CANARA INDUSTRIAL & BANKING SYNDICATE LTD.**

**HEAD OFFICE: UDIPI. (S. INDIA.)**

**Or any of its branches.**



# ನಿಮಗೆ ಬೇಸರವಾದಾಗ ನಮಗೆ ಬರೆಯಿರಿ.

## ಹೀಗೂ ಅಗ್ರಲೇಖ ಬರಿಯುವುದಿದೆಯೇ?

“ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಕಮಾನ ನಿಖಿಲದೇಶಾವತಂಸ ಕರ್ನಾಟಕ ಜನಪದ ಸಂಪದಧಿಷ್ಠಾನ ಭೂತ ಶ್ರೀಮನ್ಮಹಿಶೂರ ಮಹಾಸಂಸ್ಥಾನ ಮಧ್ಯ ವೇದೀಸ್ಯಮನಾವಿಕಲಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ, ನಿಖಿಲರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನಸಿಂಹಾಸನಾರೂಢ, ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ವೀರ ನರಪತಿ, ಬಿರುತೆಂದೆಂಬರ ಗಂಡ, ಲೋಕೈಕವೀರ, ಯದುಕುಲ ಪಯಃ ಪಾರಾವಾರಕಲಾನಿಧಿ, ಶಂಖಚಕ್ರಾಂಕುಶ ಕುಠಾರ ಮತ್ಸ್ಯ, ಶರಭಸಾಳ್ವಗಂಡಭೇರುಂಡ, ಧರಣೀವರಾಹ ಹನುಮದ್ಗರುಡಕಂಠೀರವಾದ್ಯನೇಕ ಬಿರುದಾಂಕಿತರಾದ ಶ್ರೀ ಚಾಮುಂಡಾಂಬ ವರಪ್ರಸಾದೋದ್ಭವ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರರು” ಎಂದೆಲ್ಲಾ ಅಗ್ರಲೇಖವನ್ನಾರಂಭಿಸಿದೆ ಮೈಸೂರಿನ ಪ್ರಸಿದ್ಧ ಪತ್ರಿಕೆಯೊಂದು. ಇದು ಹೇಗೆ ತೋರುತ್ತದೆ ನಿಮಗೆ? ಈ ಶಬ್ದಗಳಿಗೇನಾದರೂ ಅರ್ಥವಿದೆಯೇ? ಎಂದು ಕೇಳುತ್ತಾರೆ ಶಿವಮೊಗ್ಗದ ಶ್ರೀ ಎಸ್. ಎಸ್. ಆರ್ ರವರು.

ನಿಮಗೆ ತೋರಿದಂತೆಯೇ ನನಗೂ ತೋರುತ್ತದೆ. ಅರ್ಥವಿರುವ ಶಬ್ದಗಳನ್ನೇ ಮಾತಾಡಿ ಬರೆಯುವವರು ಬಹಳ ಕಡಿಮೆ ಮಂದಿ.

## ಕರ್ನಾಟಕದ ದುರ್ದೈವ.

ಶ್ರೀಗಳಾದ ಗಂಗಾಧರ ರಾವ್ ದೇಶಪಾಂಡೆ, ದಿವಾಕರ್, ಹರ್ಡಿಕರ್, ಹುಕ್ಕೇರಿಕರ್, ನಾರಾಯಣರಾವ್ ಜೋಶಿಗಳೇ ಮೊದಲಾದ ಕರ್ನಾಟಕದ ಅಗ್ರಗಣ್ಯ ಮುಖಂಡರುಗಳು ಈಗ ಏನುಮಾಡುತ್ತಿದ್ದಾರೆ? ಈ ಸಂಧಿಕಾಲದಲ್ಲಿಯೂ ಅವರು ಶರಸನ್ಯಾಸ ಬಿಟ್ಟು ಹೊರಬರಲಾರರೇ? ಕರ್ನಾಟಕದ ಈಗಿನ ಕಾಂಗ್ರೆಸ್ ಮುಂದಾಳುಗಳಿಂದ ಏನು ಕೆಲಸವಾದೀತು! ಕರ್ನಾಟಕದ ದುರ್ದೈವವಲ್ಲವೇ ಇದು? ಎಂದು ಪ್ರಶ್ನೆ ಅಂಕೋಲೆಯ ಶ್ರೀ. ಬಿ. ರಾ. ಎಸ್. ರವರದು.

ರಾಮದುರ್ಗದ ದುರಂತದ ಶವವು ಇನ್ನೂ ನಾರುತ್ತಿರುವುದೋ ಏನೋ! ಈ ಮುಖಂಡರ ಮೂಗಿನೊಳಗೆ ಅಂತೂ ಇದು ಕರ್ನಾಟಕದ ದುರ್ದೈವವೆನ್ನುವುದರಲ್ಲಿ ಸಂದೇಹವಿಲ್ಲ. ಈ ಕೆಲಸ ಮಾಡಲಾಗುವುದಿಲ್ಲವೆಂದು ಜನರು ಹೇಳಿದರೂ ಈಗಣ ಮುಖಂಡರೆನಿಸುವವರು ತಿಳಕೊಳ್ಳಬೇಕಲ್ಲವೇ!

## ಇದು ರಾಷ್ಟ್ರೀಯತೆಯೇ?

ಬರುವ ತಿಂಗಳಲ್ಲಿ ಕರ್ನಾಟಕ ನಾಡಹಬ್ಬವೆಂದು ವಿಜಯದಶಮಿಯು ಕರ್ನಾಟಕದಲ್ಲೆಲ್ಲಾ ಆಚರಿಸಲ್ಪಡುತ್ತದೆ. ಈ ಸಂದರ್ಭದಲ್ಲಿ ನಮ್ಮ ಉತ್ತರ ಕರ್ನಾಟಕದವರನೇಕರು ವಿದ್ಯಾರಣ್ಯರ ಮತ್ತು ವಿಜಯನಗರದ ಮಹಿಮೆ ವೈಭವಗಳನ್ನು ಜನತೆಯ ಮುಂದೆ ನಾನಾರೀತಿ ಬಣ್ಣಕೊಟ್ಟು ಚಿತ್ರಿಸುತ್ತಾರೆ. ನಾನು ಹಂಪಿಗೆ ಹೋಗಿ ವಿಜಯನಗರದ ಮತ್ತು ವಿಜಾಪುರಕ್ಕೆ ಹೋಗಿ ಆದಿಲ್‌ಶಾಹಿ ರಾಜ್ಯದ ಸಂಸ್ಕೃತಿ ಮತ್ತು ವೈಭವವನ್ನು ನೋಡಿದ್ದೆ. ನನಗೇನೋ ಆದಿಲ್‌ಶಾಹಿ ಸಂಸ್ಕೃತಿಯೇ ಶ್ರೇಷ್ಠವೆನಿಸುತ್ತದೆ. ಆದರೆ ಆ ಸುದ್ದಿಯನ್ನೆತ್ತುವ ಕನ್ನಡಿಗರೇ ವಿರಳರಲ್ಲ! ಹಿಂದುಗಳು ವಿಜಯನಗರ ಸಾಮ್ರಾಜ್ಯಕ್ಕೆ ಮಹತ್ವವೀಯುವಾಗ ಮುಸಲ್ಮಾನರಾದ ನಾವು ವಿಜಾಪುರ ಸಾಮ್ರಾಜ್ಯಕ್ಕೇಕೆ ಮಹತ್ವವೀಯಬಾರದು? ವಿದ್ಯಾರಣ್ಯ ವಿಜಯನಗರ ಸಂಸ್ಕೃತಿಗೆ ಮಹತ್ವವೀಯುವ ಹಬ್ಬವು ಕರ್ನಾಟಕ ನಾಡಹಬ್ಬವಾಗುವುದು ಹೇಗೆ? ಎಂದು ಕೇಳುತ್ತಾರೆ ಹುಬ್ಬಳ್ಳಿಯ ಶ್ರೀ. ಎಚ್. ಎ. ಎಸ್ಸರು.

ನಾವೂ ನೋಡಿದ್ದೇವೆ ಹಂಪಿ ಮತ್ತು ವಿಜಾಪುರಗಳನ್ನು ನಮಗಂತೂ ಈ ಲಿಂಗ ಮತ್ತು ಘೋರಿಗಳ ಸಂಸ್ಕೃತಿಯೇ ಬೇಡವೆನಿಸುತ್ತದೆ. ಕನ್ನಡಿಗರು ಹಳೆಯದನ್ನು ಅಗೆದು ತೆಗೆಯುವ ಬದಲಿಗೆ ನವೀನ ಹಾಗೂ ನಿಜವಾದ ರಾಷ್ಟ್ರೀಯ ಸಂಸ್ಕೃತಿಯನ್ನು ರಚಿಸುವಷ್ಟರ ತೇಜಸ್ವಿಗಳಾಗಿರುವುದಿಲ್ಲವೇ?

# ಕಪಟನಾಟಕ ಮಂಡಲಿ ಲಿಮಿಟೆಡ್

## ಬೇಗನೆ ಬೇಕಾಗಿದ್ದಾರೆ

(ಈ ಮಂಡಲಿಯು ಬೋಗಸ್ ಕಂಪೆನಿ ಆಕ್ಟ್ ಮೇರೆಗೆ ಈಗ ತಾನೆ ರಿಜಿಸ್ಟ್ರಮಾಡಲ್ಪಟ್ಟು ಜಗತ್ತಿನ ಎಲ್ಲಾ ತರದ ಬಿಸಿನೆಸನ್ನೂ ಆರಂಭಿಸಿದೆ. ರಜಿಸ್ಟರ್ಸ್ ಆಫೀಸು, ಮೌಂಟ್ ಎವರೆಸ್ಟ್, ಹಿಮಾಲಯ ಮೌಂಟನ್ಸ್, ನೋರ್ತ್ ಇಂಡಿಯಾ. ಅನಧಿಕೃತ ಮತ್ತು ಅನಿಯಮಿತ ಭಂಡವಾಳವುಳ್ಳ ಕಂಪೆನಿಯ ಕಾರ್ಯಕ್ಷೇತ್ರವು ಲೋಕವ್ಯಾಪಕವಾಗಿದೆ. ಸ್ತ್ರೀ ಏಜಂಟರಿಗೆ ವಿಶೇಷ ಅನುಕೂಲತೆಗಳನ್ನೀಯಲಾಗುವುದು.)

### ಇನಶ್ಯೂರೆನ್ಸ್ ಏಜೆಂಟರು.

ಕ್ಷಯ ಮೊದಲಾದ ರೋಗಪೀಡಿತರಾಗಿ ಇತ್ತ ದೂರ ಅತ್ತ ಹತ್ತಿರವಾದವರನ್ನೂ, ಲೋಕದಲ್ಲಿ ಅಸ್ತಿತ್ವವೇ ಇಲ್ಲದವರನ್ನೂ ಸಾಧ್ಯವಾದಷ್ಟು ಹೆಚ್ಚಿನ ಮೊಬಲಗಿಗೆ ಇನ್‌ಶ್ಯೂರ್ ಮಾಡಿ ಸಿಕ್ಕಿಬೀಳದೆ ಕ್ಲೈಮುಗಳ ಹಣಪಡೆಯಲು ಸಮರ್ಥರಾದ ಅತ್ಯಂತ ಚತುರ ಏಜೆಂಟರು ಬೇಕು. ಯಾವ ವಿಮಾ ಕಂಪೆನಿಯು ಕೊಡದಷ್ಟು ಧಾರಾಳ ಕಮಿಶನು ಕೊಡಲಾಗುವುದು. ಆರೋಗ್ಯವಂತರಾದನ್ನಾದರೂ ಅತಿ ಹೆಚ್ಚಿನ ಹಣಕ್ಕೆ ವಿಮೆಮಾಡಿ ಅನಂತರ ಯಮಲೋಕ ತೋರಿಸಿ ಕ್ಲೈಮ್ ಹಣ ದಕ್ಕಿಸಿಕೊಳ್ಳುವ ಎದೆಗಾರಿಕೆಯ ಏಜೆಂಟರು ಸಿಕ್ಕಿದರೆ ಮತ್ತೂ ಹೆಚ್ಚು ಕಮಿಶನು ಕೊಡಲಾಗುವುದು. ತಾವೇ ಸಹಸ್ರಗಟ್ಲೆ ಐವೇಜಿಗೆ ವಿಮೆಮಾಡಿ ಆತ್ಮಹತ್ಯೆಮಾಡಿಕೊಳ್ಳಲು ಸಿದ್ಧರಿರುವ ವಿರಕ್ತಿ ಏಜೆಂಟರು ಸಿಕ್ಕಿದ ಪಕ್ಷದಲ್ಲಿ ಅವರ ಹೆಂಡತಿ ಮಕ್ಕಳಿಗೆ ಅವರ ಕ್ಲೈಮುಗಳ ಹಣದಲ್ಲಿ ಸೇಕಡ 75 ರಷ್ಟನ್ನು ಕೊಡಲಾಗುವುದು. ಮನೆಗಳನ್ನು ಇನ್‌ಶ್ಯೂರ್‌ಮಾಡಿಸಿ ಸುಟ್ಟು ಹಾಕುವ, ಹಳೆ ಮೋಟಾರುಗಳನ್ನು ವಿಮೆಮಾಡಿ ಬೇಕೆಂದು ಎಕ್ಸಿಡೆಂಟ್ ಮಾಡಿಸುವ, ಹಡಗಗಳನ್ನು ಇನ್‌ಶ್ಯೂರ್ ಮಾಡಿ ಸಮುದ್ರದಲ್ಲಿ ಮುಳುಗಿಸುವುದೇ ಮೊದಲಾದ ಹೊಸ ಹೊಸ ರೀತಿಯ ವಿಮೆ ಇಳಿಸಿ ಠೋಕರು ಕೊಡುವುದರಲ್ಲಿ ನಿಪುಣ ಏಜೆಂಟರು ದೊರೆತಲ್ಲಿ ಸಂಬಳ, ಕಮಿಶನು, ಬೋನಸು ಮತ್ತು ಇನಾಮು ಕೊಡಲಾಗುವುದು. ತ್ವರೆಮಾಡಿರಿ. ಕೂಡಲೆ ಅರ್ಜಿಹಾಕಿರಿ. ಅರ್ಜಿದಾರರೆಲ್ಲಾ ಕಂಪೆನಿಯ ತಜ್ಞರ ಇಂಟಲಿಜೆನ್ಸ್ ಟೆಸ್ಟಿಗೆ ಬುದ್ಧಿ ಪರೀಕ್ಷೆಗೊಳಗಾಗಬೇಕು.

### ಆಢ್ಯ ಡೈರೆಕ್ಟರರು ಬೇಕು.

ಕಂಪೆನಿ ಆಕ್ಟೆಂದರೆ ಏನೆಂದು ಗೊತ್ತಿಲ್ಲದೆ, ಕಂಪೆನಿಯ ಕಾರ್ಯ ಕಲಾಪಗಳಲ್ಲಿ ಒಂದಿಷ್ಟು ಆಸಕ್ತಿ ವಹಿಸದೆ, ಅದರ ಆಡಳಿತದಲ್ಲಿ ಯಾವ ಜವಾಬ್ದಾರಿ ವಹಿಸಲೂ ತಯಾರಿಲ್ಲದೆ ಮೇನೇಜಿಂಗ್ ಡೈರೆಕ್ಟರರು ಮಾಡಿದುದಕ್ಕೆ ಕಣ್ಮುಚ್ಚಿ ಸಹಿ ಹಾಕಿ ಪ್ರತಿಯೊಂದು ಡೈರೆಕ್ಟರರ ಸಭೆಗೂ ತಪ್ಪದೆ ಬಂದು ಸಿಟ್ಟಿಂಗ್ ಫೀಸನ್ನು ಒಳಗೆ ಹಾಕುವುದರಲ್ಲಿ ಮಾತ್ರ ಬಹಳ ಜಾಗ್ರತೆ ತೆಗೆದುಕೊಳ್ಳುವ ಆಢ್ಯ ಹಾಗೂ ಭಾರದಾನಿಯಿರುವ ಡೈರೆಕ್ಟರರು ಡಜನ್‌ಗಟ್ಲೆ ಬೇಕಾಗಿದ್ದಾರೆ. ಸಿಟ್ಟಿಂಗ್ ಫೀಸು ಧಾರಾಳ ಸಿಗುತ್ತೆ. ದಸ್ಕತ್ ಹಾಕಲು ಸ್ವಯಂ ಚಾಲಿತಪೇನು ತಯಾರಿಸಲ್ಪಟ್ಟಿರುವುದರಿಂದ ಅದಕ್ಕೂ ಕಷ್ಟವಿಲ್ಲ.

### ಮದುವೆ ದಲಾಲಿಗಳು ಬೇಕು

ಪ್ರತ್ಯಕ್ಷ ವಿಶ್ವಕರ್ಮನಂತಹ ರಚನಾ ಚಾತುರ್ಯ ಮತ್ತು ಬೃಹಸ್ಪತಿಯಂತಹ ನಾಲಿಗೆ ಇರಬೇಕು. ಈ ದಲಾಲಿಗಳಿಗೆ ಕಾಳಿಮಹಾಕಾಳಿಗಳನ್ನು ರತಿ, ಶಚೀದೇವಿಯರನ್ನಾಗಿಯೂ, ಹನುಮಂತ ಜಾಂಬವರನ್ನು ಮನ್ಮಥ ಮಹೇಂದ್ರರನ್ನಾಗಿಯೂ, ಮಾರ್ಪಡಿಸುವ ಮಾಂತ್ರಿಕ ಶಕ್ತಿ ಬೇಕು ಮದುವೆ ದಲಾಲಿಗಳಿಗೆ. ಮತ್ತೆ ಜಾತಿ, ನೀತಿ ಮತ, ಮಾನ ಮರ್ಯಾದೆಯ ಗೊಡವೆಯೇ ಇಲ್ಲದೆ ಹೆಣ್ಣು ಜಾತಿಯನ್ನು ಗಂಡು ಜಾತಿಗೆ ಗಂಟುಹಾಕಲು ಸಿದ್ಧರಿರಬೇಕು. ವರ ಅಥವಾ ವಧು ದಕ್ಷಿಣೆಯಲ್ಲಿ ಕಡಿಮೆಯೆಂದರೆ ಸೇಕಡ 10 ರಷ್ಟನ್ನು ಪ್ರತಿಫಲವಾಗಿ ಪಡೆಯುವವರಾಗಬೇಕು. ಲಾಭದ ಸೇಕಡ 99 ರಷ್ಟು ಸಂಬಳಕೊಡಲಾಗುವುದು. ಈ ದಲಾಲಿಗಳು ಪ್ರೊಟೇಶನರುಗಳಾಗಿ ಕೆಲ ಸಮಯ ಕೆಲಸಮಾಡಿ ತಮ್ಮ ಜಾಣ್ಮೆಯನ್ನು ಸಿದ್ಧಗೊಳಿಸಬೇಕು. ಮನಸ್ಸಾಕ್ಷಿಗೆ ಒಂದಿಷ್ಟಾದರೂ ಕಿವಿ ಕೊಡುವವರು, ಮಾನ ಮರ್ಯಾದೆಯ ಗೊಡವೆಯಿರುವವರು, ಸುಳ್ಳು, ವಂಚನೆ, ಮೋಸ, ಕಣ್ಣುಕಟ್ಟು, ದಗೆ ಮೊದಲಾದುವುಗಳಿಗೆ ಹೇಸುವವರು ಈ ದಲಾಲಿ ಕೆಲಸಕ್ಕೆ ಅರ್ಜಿಹಾಕಬಾರದು.

(ಇನ್ನು ಯಾವ್ಯಾವ ಏಜೆಂಟರು ಬೇಕೆಂದು ಮುಂದಿನ ಸಂಚಿಕೆ ನೋಡಲು ಮರೆಯಬೇಡಿರಿ.)

# Thus observes the Indian Insurance Journal

## in June, 1940 issue:-

"A splendid example of a mutual life assurance company that has conducted its first five years' affairs on an exceptionally economic basis and has in a short time come to be recognised as a really sound company is the Canara Mutual Assurance Company of Udipi in South India."

. . . . . . . .

"We have beencarefully watching the progress of the Canara Mutual since it was established in 1935 and we feel confident that the Company is staffed with men who exercise caution in the selection of lives as well as in the manner of investing its life assurance funds. Not only that. They know also how to secure good business at low cost. A combination of such excellent qualities are not very common among managements of insurance Companies in this country.

. . . . . . .

Recenty the constitution of the Company has been amended by which even policy-holders holding small policies are entitled to vote at meetings.

*ALL PROFITS TO POLICY-HOLDERS ALONE*

**THE CANARA MUTUAL ASSURANCE COMPANY, LIMITED.**

**UDIPI. S. INDIA.**

*NO SHARE-HOLDERS TO SHARE IN THE PROFITS.*

# ★ ಇಂದಿನ ಹತ

## 1 ಗಂಡಾಂತರಗಳಲ್ಲೇ



### ಅದೃಷ್ಟಶಾಲಿ ವಿನ್ನಿ

ಜರ್ಮನರೊಡನೆ ಯುದ್ಧಾರಂಭವಾಗಿ ಮಿತ್ರ ರಾಷ್ಟ್ರಗಳಿಗೆ ಗಂಡಾಂತರ ಉಂಟಾಗಹತ್ತಿದೊಡನೆಯೇ 'ವಿನ್ನಿ'ಯು ಪ್ರಧಾನಮಂತ್ರಿಯಾಗಬೇಕೆಂಬ ಕೂಗೆದ್ದಿತು. ಇಂಗ್ಲಂಡಿನಲ್ಲಿ 'ವಿನ್ನಿ'ಎಂದರೆ ಸುದೈವವೆಂಬ ಭಾವನೆಯು ಜನತೆಯಲ್ಲಿ ಹಬ್ಬಿಹೋಗಿದೆ. ಅಂತೆಯೇ ವಿನ್‌ಸ್ಟನ್ ಚರ್ಚಿಲ್ಲರು ಬ್ರಿಟನಿನ ಪ್ರಧಾನ ಮಂತ್ರಿಗಳಾದರು. ಎದೆತಟ್ಟಿ, ಭುಜಚಪ್ಪರಿಸಿ, ತೊಡೆ ಹೊಡೆದು, ಹಿಟ್ಲರ್ ಗೋರಿಂಗ್, ಗೊಬ್ಬೆಲ್ಸ್ ಮೂವರಿಗೂ ತಾನೊಬ್ಬನೇ ಸಡ್ಡು ಹೊಡೆದು, ಇತಿಹಾಸದಲ್ಲೇ ಅಭೂತಪೂರ್ವ ವಿಪತ್ತಿನಲ್ಲಿ ಇಂಗ್ಲೆಂಡಿನ ರಕ್ಷಕರಾಗಿ ಮುಂದೆ ಬಂದಿರುವರು. ಇಂದೀಗ ಚರ್ಚಿಲ್ಲರೆಂದರೆ ಬ್ರಿಟನಿನ ಅದೃಷ್ಟನಾಯಕ. ಹಿಟ್ಲರರಿಗೆ ಪ್ರತಿಹಿಟ್ಲರರಾಗಿ ನಾಝಿ ದಿಗ್ವಿಜಯದ ಹಾವಳಿಯಿಂದ ಲೋಕವನ್ನು ರಕ್ಷಿಸುವ ದೀಕ್ಷಾಬದ್ಧನಾಗಿರುವ ಮಹಾವೀರ. ಇದೇ ತಾ. 17ರಲ್ಲಿ ಬ್ರಿಟಿಷ್ ಚಕ್ರವರ್ತಿಗಳು, ಅಮೆರಿಕದಿಂದ ಇಂಗ್ಲೆಂಡಿಗೆ ಬಂದ ಡಿಸ್ಟ್ರೋಯರ್ ಹಡಗಗಳಲ್ಲಿ ಅಗ್ರಗಣ್ಯವಾದುದಕ್ಕೆ ಚರ್ಚಿಲ್ ಎಂಬ ಹೆಸರಿತ್ತಿರುವರು. ಪಾರ್ಲಿಮೆಂಟಿನಲ್ಲಿ ಈ ಸಂಗತಿಯು ಪ್ರಕಟವಾದೊಡನೆಯೇ ಲಜ್ಜೆಯಿಂದ ತಲೆಬಾಗಿಬಿಟ್ಟರು ಚರ್ಚಿಲ್ಲರು. 'ಎತ್ತಿ ಹಿಡಿ ತಲೆ!' ಎಂದು ಕೂಗಿದರು ಪಾರ್ಲಿಮೆಂಟ್ ಮೆಂಬರರು ಕೆಲವರು.

ಆದರೆ ಗಂಡಾಂತರಗಳಲ್ಲಾದರೆ ರುಂಡ ಹೋಗುವುದಾದರೂ ತೃಣೀಕರಿಸಿ ತಲೆಯೆತ್ತಿ ನಿಲ್ಲುವ ಗಂಡಗಲಿ ಚರ್ಚಿಲ್ಲರು.

### ಮೃತ್ಯುದವಡೆಯಿಂದ ಪಾರಾದುದು

ಜಲ, ನೆಲ, ಮತ್ತು ಆಕಾಶದಲ್ಲಿ ಒಂದೆರಡಲ್ಲ, ನೂರು ಸಲ ಪ್ರಾಣಾಪಾಯಕ್ಕೊಳಗಾಗಿ, ಇಂದು ಇಂಗ್ಲೆಂಡಿನ ರಕ್ಷಣೆಗಾಗಿಯೇ ಪಾರಾಗಿ ಉಳಿದಿರುವ ಅದೃಷ್ಟಶಾಲಿಯೆನ್ನಬಹುದು. ಚರ್ಚಿಲ್ಲರನ್ನು ಬಾಲಕನಿದ್ದಾಗ ಕಲಿಯುವುದರಲ್ಲಿ ದಡ್ಡನಿದ್ದು ಅಧ್ಯಾಪಕರಿಗೊಂದು ಸಮಸ್ಯೆಯಾಗಿದ್ದರು ವಿನ್‌ಸ್ಟನರು. ಕಲಿಯುವುದರಲ್ಲಿ ಹಿಂದಾದುದರಿಂದ ಅವರ ತಂದೆಯವರವರನ್ನು ವಕಾಲತಿಗೆ ಹಾಕುವ ಆಲೋಚನೆ ಬಿಟ್ಟು ಸೇನೆಗೆ ಸೇರಿಸಿದರು. 18ನೇ ವಯಸ್ಸಿನಲ್ಲಿ ಬೋರ್ನಿವೌತ್ ಎಂಬಲ್ಲಿಗೆ ಚರ್ಚಿಲ್ಲರು ವಿಹಾರಕ್ಕಾಗಿ ಹೋಗಿದ್ದಾಗ ಅವರ ತಮ್ಮನೂ ಚಿಕ್ಕಪ್ಪನ ಮಗನೂ ಅವರನ್ನೋಡಿಸಿ ಬೆನ್ನುಹಿಡಿಯುವ ಪಂಥಹಾಕಿದರು. ಓಡಿ ಓಡಿ ಸಾಕಾಗಿ ಬೆನ್ನಟ್ಟಿಬರುವವರಿಂದ ತಪ್ಪಿಸಿಕೊಳ್ಳಲು ಚರ್ಚಿಲ್ಲರು ಇಕ್ಕಟ್ಟಾದ ಕಣಿವೆಯೊಂದರ ಮೇಲಿನ ಸೇತುವೆ ದಾಟಹೋಗುವ ನಿರ್ಧಾರಮಾಡಿದರು. ಆದರೆ ಬೇರೆಬೇರೆಯಾಗಿ ಬೆನ್ನಟ್ಟುತ್ತಿದ್ದ ಅವರ ತಮ್ಮನೂ ಚಿಕ್ಕಪ್ಪನ ಮಗನೂ, ಚರ್ಚಿಲ್ಲರು ಸೇತುವೆಯ ಮಧ್ಯಕ್ಕೆ ಹೋಗುವಷ್ಟರಲ್ಲೇ ಒಬ್ಬ ಆಚೆ ಇನ್ನೊಬ್ಬ ಈಚೆಯಿಂದ ಬಂದು ಅವರನ್ನು ತಡೆದರು. ನಡುವೆ ಸಿಕ್ಕಿಬಿದ್ದರವರು. ಕಣಿವೆಯಲ್ಲಿ ಸೇತುವೆ ಮುಟ್ಟುವನಕ ಶಾಖೆಬಿಟ್ಟಿರುವ ದೊಡ್ಡ ದೇವದಾರ ಮರಗಳಿದ್ದುವು. ದೇವದಾರದ ಗೆಲ್ಲುಗಳ ಮೇಲೆ ಹಾರಿ ಕೆಳಗಿಳಿದು ಹೋಗಬಹುದೆಂದವರು ಊಹಿಸಿದರು. ಗೆಲ್ಲುಮುರಿದರೆ ಕೆಳಗೆ ಕಣಿವೆಗೆ ಬೀಳುವ ದೊಡ್ಡ ಅಪಾಯಕ್ಕೊಳಗಾಗಬೇಕಿತ್ತು. ಅದನ್ನು

ಕಗ್ಗತ್ತ

ಮ್ಯೂನಿಚ್

ಲಕ್ಷಿಸದೆ ಹಾ
ಗೆಲ್ಲು ಮುರಿದು
ಹಿಡಿಯುತವರಿಗೆ
ಹರಿದುಹೋಗು
ಸ್ವಲ್ಪ ಸಮಯ
ಲೊಸೇನ್ ಸರೋ
ಯಲ್ಲಿ ವಿಹರಿಸ
ಯೊಂದು ಅವರ
ಚರ್ಚಿಲ್ಲರು ಎ
ಯನ್ನು ಹಿಂತರ
ಪ್ರಾಣಾಪಾಯ
ಚರ್ಚಿಲ್ಲರು ಇ
ಕೋಲೆಜಿನಲ್ಲಿ '
ದರು. ಅನಂತ
ವುಂಟಾಯಿತೋ
ಚರ್ಚಿಲ್ಲರು.
ತನ್ನ ಕೆಲಸಕ್ಕೆ
ಗುತ್ತಿದ್ದರು. ಹಿ
ನಲ್ಲಿ ಯುದ್ಧಜ
ದಕ್ಷಿಣ ಆಫ್ರಿಕಾ
ಹಿಡಿಯಲ್ಪಟ್ಟು
ಜೀವಂತವಾಗಿ
ರನ್ನು ತಂದ
ಇನಾಮು ಕೊ
ಯರ್ ಸೇನಾ
ಪ್ರಬಲ ಸಹಾ

# ಂದಿ ಮಹಾ ವ್ಯಕ್ತಿಗಳು ★

# ಾಗಿ ಬೆಳೆದ ಗಂಡುಗಲಿ ಚರ್ಚಿಲ್ಲರು.

## ್ರಕಾಶಮಾನವಾಗುವ ಬ್ರಿಟಿಷ್ ರತ್ನ.

## ್ತ-ನೆಲ್ಸನ್ ಶುಭವನ್ನುಂಟುಮಾಡುವುದೇ ?

ರ್ಚಿಲ್ಲರು.
ೂರ್ದಿನ
ಗೆಯಿಂದ
. ಇದಾಗಿ
ೆಯಿಂಡಿನ
ದೋಣಿ
ಬಿರುಗಾಳಿ
ುಯ್ಯಿತು.
ದೋಣಿ
ಕಾರಿ ಈಜಿ
ವಿನ್‌ಸ್ಪನ್
ೖ ಸೈನಿಕ
ಶನ್ ಪಡೆ
ಅಪಾಯ
ುತ್ತಿದ್ದರು
ವುಂಟಾದರೆ
ಲ್ಲಿಗೆ ಹೋ
ಸರಹದ್ದಿ
ಪಡೆದರು.
ದಲ್ಲಿ ಸೆರೆ
ಕೊಂಡರು.
ಚರ್ಚಿಲ್ಲ
ಪವನು
ದ್ದ ದೋ
ಇಂದವರ

### ಅಪಾಯದಿಂದುಂಟಾದ ಲಾಭ

ಚರ್ಚಿಲ್ಲರು ಬೇಗ್ಗೆ ಬೇಗ ಏಳುವವರು. ಆದುದರಿಂದಲೇ ಅವರು ಅಪಾಯಕ್ಕೊಳಗಾದ ರೆಂದು, ದಕ್ಷಿಣ ಆಫ್ರಿಕದಲ್ಲಿ ಅವರೊಂದಿಗೆ ಯುದ್ಧ ಬಾತ್ಮಿದಾರರಾಗಿದ್ದ ಈಗಣ ಇಂಡಿಯಾ ಸೆಕ್ರೆಟರಿ ಅಮೆರಿಯವರು ಅವರಿಗೆ ತಮಾಷೆಮಾಡಿದಾಗ, "ನಾನು ಬೇಳದಿದ್ದರೆ ಹಿಡಿಯಲ್ಪಡುತ್ತಿದ್ದಿಲ್ಲ. ಹಿಡಿಯಲ್ಪಡದಿದ್ದಲ್ಲಿ ತಪ್ಪಿಸಿಕೊಳ್ಳಲಾಗುತ್ತಿದ್ದಿಲ್ಲ. ನಾನು ಸೆರೆಹಿಡಿಯಲ್ಪಟ್ಟು ತಪ್ಪಿಸಿಕೊಂಡ ಘಟನೆಯು ಭಾಷಣ ಮತ್ತು ಪುಸ್ತಕಬರೆಯಲು ನನಗೆ ವಿಷಯವನ್ನಿತ್ತಿತ್ತು. ಆದರಿಂದ ನನಗೆ ಹಣದೊರೆತುದರಿಂದಲೇ 1900 ರಲ್ಲಿ, ಅಂದರೆ ನಿಮಗಿಂತ (ಅಮೆರಿಗಿಂತ) 10 ವರ್ಷ ಮೊದಲೇ ಪಾರ್ಲಿಮೆಂಟಿಗೆ ಹೋಗಲು ನನಗೆ ಸಾಧ್ಯವಾಯಿತು" ಎಂದು ಉತ್ತರವಿತ್ತರು ಚರ್ಚಿಲ್ಲರು. ಚರ್ಚಿಲ್ಲರು ಹಿಡಿಯಲ್ಪಟ್ಟ ದಿನ, ಅವರು ಬೇಗಎದ್ದು ಬೆಳಿಗ್ಗೆ ಹೊರಟುಹೋಗುವ ಸಶಸ್ತ್ರ ಟ್ರೈನ್‌ಹತ್ತಿದರು. ಆ ಟ್ರೈನನ್ನು ವೈರಿಗಳು ತಡೆದು ಆದರಲ್ಲಿದ್ದವರನ್ನು ಸೆರೆಹಿಡಿದರು. ಆದರೆ ಅಮೆರಿಯವರು ಬೆಳಿಗ್ಗೆ ಬೇಗ ಏಳಲಿಲ್ಲ. ಬೆಳಿಗ್ಗಿನಟ್ರೈನಿಗೆ ಹೋಗಲಾಗಲಿಲ್ಲಅವರಿಗೆ. ಆದುದರಿಂದ ಅವರು ಅಪಾಯಕ್ಕೊಳಗಾಗಲಿಲ್ಲ.

### ಸಾಹಸಪರ ರಾಜಕೀಯ ಜೀವನ

ಚರ್ಚಿಲ್ಲರ ರಾಜಕೀಯ ಜೀವನವೂ ಅತ್ಯಂತ ಸಾಹಸಪರವಾದುದು. 1914-18ರಲ್ಲಿ ಯುದ್ಧದಲ್ಲಿ ಕೆಲಸಮಯ ಪಶ್ಚಿಮ ರಣರಂಗಕ್ಕೆ ಹೋಗಿದ್ದರು. ಒಮ್ಮೆ ಅವರು ತನ್ನ ನೆಲಸುರಂಗದಲ್ಲಿ ಕಾಗದಬರೆಯುತ್ತಿದ್ದರು. ಆಗ ಪರಿಚಿತ ಸೇನಾ ನಾಯಕನೊಬ್ಬನಿಂದ ಅವರಿಗೆ ಕರೆಬಂತು ಕೂಡಲೆ ಎದ್ದು ಹೋದರು. ಆದರೆ ಸೇನಾನಿಗಳವರಿಗೆ ಮಾತಾಡಸಿಗಲಿಲ್ಲ. ಬಹಳ ಕಷ್ಟಗೊಂಡು ಚರ್ಚಿಲ್ಲರು ಕೆಸರಲ್ಲಿ ಕಾಲೆಳೆಯುತ್ತಾ ಹಿಂತಿರುಗಿದರು. ಆದರೆ ಹಿಂದೆಬಂದು ನೋಡುವಾಗಅವರಿದ್ದ ಸುರಂಗ ಸಿಡಿಮದ್ದಿನಿಂದ ಸ್ಫೋಟವಾಗಿ ಅದರೊಳಗಿದ್ದವರೆಲ್ಲಾ ಕೊಲ್ಲಲ್ಪಟ್ಟಿದ್ದರು. ಚರ್ಚಿಲ್ಲರು ಕರೆಬಂದು ಹೋಗದಿರುತ್ತಿದ್ದರೆ ಹತರಾಗುತ್ತಿದ್ದರು. 1912-19ರಲ್ಲಿ ಚರ್ಚಿಲ್ಲರು ಬಹಳವಾಗಿ ವಿಮಾನಗಳಲ್ಲಿ ಸಂಚರಿಸುತ್ತಿದ್ದರು. ಒಮ್ಮೆ ಹಾರಾಡುತ್ತಿದ್ದಾಗ ಅವರ ವಿಮಾನಕ್ಕೆ ಬೆಂಕಿ ಹಿಡಿಯಿತು. ಇನ್ನೆರಡು ಸಂದರ್ಭಗಳಲ್ಲಿ ಅವರ ವಿಮಾನಗಳು ಮುರಿದುಬಿದ್ದುವು. ಆದರೆ ಚರ್ಚಿಲ್ಲರು ಯಾವಾಗಲೂ ಸುರಕ್ಷಿತರಾಗಿರುತ್ತಿದ್ದರು. ಅವರು ಭಾಷಣಮಾಡಿ ದುಡ್ಡುಮಾಡಲು ಅಮೆರಿಕಕ್ಕೆ ಹೋಗಿದ್ದಾಗ, ನ್ಯೂಯೋರ್ಕ್ ಪಟ್ಟಣದ ರಸ್ತೆಯೊಂದರಲ್ಲಿ ಟೇಕ್ಸಿಯೊಂದು ಅವರಮೇಲೆ ಹೋಗಿ ಬದುಕಲು ಸಾಧ್ಯವೇ ಇಲ್ಲೆಂಬಂತೆತೋರಿತೊಂದುಕ್ಷಣ ಆದರೆ ಅಪಾಯದಿಂದ ವಿಚಿತ್ರವಾಗಿ ಪಾರಾದರು. ರಾಜಕೀಯದಲ್ಲಿಯೂ ಎಂತಹ ಅಪಾಯಕ್ಕೂ ಅಂಜಿದವರಲ್ಲ ಚರ್ಚಿಲ್ಲರು. ಪರಿಣಾಮದ ಗೊಡವೆಯೇ ಇಲ್ಲದೆ ಮನೋ ನಿರ್ಧಾರದಂತೆ ನಡೆದವರು. ತಾನೊಬ್ಬನಾದರೂ ಹಿಂಜರಿಯದೆ ಕೈಯೆತ್ತಿ ಓಟುಕೊಡುವವರು ಪಾರ್ಲಿಮೆಂಟಿನಲ್ಲಿ. ಎಂತಹ ವಿರೋಧವನ್ನಾದರೂ ಕಡೆಗಣಿಸಿ ತನ್ನ ಅಭಿಪ್ರಾಯವನ್ನು ಖಂಡತುಂಡಾಗಿ ಮಂಡಿಸಿಬಿಡುವವರು. ತನಗೆ ತೋರಿದುದನ್ನು ಮಾಡುವವರು. ಆದುದರಿಂದಲೇ ಮೆಟ್ಟಿದಷ್ಟು ಚೂಪಾಗಿತಲೆಯೆತ್ತಿ ಚುಚ್ಚುವನೆಗ್ಗಿನ ಮುಳ್ಳೆಂದು ಹೆಸರುಪಡೆದಿದ್ದಾರೆ.

## ಮೊದಲಾಗಿ ಟೇಂಕು ಕಟ್ಟಿದವರು

ಕಳದ ಮಹಾ ಯುದ್ಧದಲ್ಲಿ ಟೇಂಕುಗಳನ್ನು ಕಟ್ಟಬೇಕೆಂದು ಹಠಹಿಡಿದವರು ಚರ್ಚಿಲ್ಲರು. ಆದರೆ ಯುದ್ಧ ಮಂತ್ರಿ ಆಫೀಸಿನವರು ಅದಕ್ಕೊಪ್ಪಲಿಲ್ಲ. ಆಗ ನೌಕಾ ಮಂತ್ರಿಯಾಗಿದ್ದ ಚರ್ಚಿಲ್ಲರು, ಯುದ್ಧಮಂತ್ರಿಗಳ ಅಭಿಪ್ರಾಯ ತಪ್ಪೆಂದು ತನ್ನ ಜವಾಬ್ದಾರಿಯಿಂದಲೇ ಟೇಂಕುಗಳಿಗೆ 'ಓರ್ಡರ್' ಕೊಟ್ಟುಬಿಟ್ಟರು. ಯುದ್ಧ ಮಂತ್ರಿಗಳ ಅಥವಾ ಅರ್ಥಸಚಿವರ ಅಭಿಪ್ರಾಯ ಕೇಳಲೇ ಇಲ್ಲ. ಚರ್ಚಿಲ್ಲರು ನೌಕಾ ಮಂತ್ರಿ ಪದವಿಬಿಟ್ಟಾಗ, ಸರಕಾರವು ಟಾಂಕಿಗಳನ್ನು ತಯಾರಿಸುವ ಅಭಿಪ್ರಾಯವನ್ನೇ ಬಿಡುವುದರಲ್ಲಿತ್ತು. ಆದರೆ ಚರ್ಚಿಲ್ಲರು ಬಿಡಲಿಲ್ಲ. ತನ್ನ ಸ್ಥಾನಕ್ಕೆ ಬರುವವರೊಡನೆ ಆಗ್ರಹದಿಂದ ಕೇಳಿಕೊಂಡರು ಟೇಂಕುಗಳನ್ನು ಕಟ್ಟಿಸಲಿಕ್ಕೆ. ಅವರದಕ್ಕೊಪ್ಪಲಿಲ್ಲ. ಹೀಗೆ ಬ್ರಿಟಿಷ್ ಟೇಂಕುಗಳನ್ನಾರಂಭಿಸಿದವರೇ ಚರ್ಚಿಲ್ಲರು. ಅದೇ ಛಲ, ಉತ್ಸಾಹ ಮತ್ತು ಕಾರ್ಯಶಕ್ತಿಯು ಇಂದೂ ಇರುವುದು ಪ್ರಧಾನ ಮಂತ್ರಿ ಚರ್ಚಿಲ್ಲರಿಗೆ. ಅವರ ಹಿರಿಯರಾದ ಮಾರ್ಲ್‌ಬರೋವಿನ ಡ್ಯೂಕರಾದ ಜೋನ್ ಚರ್ಚಿಲ್ಲರಿಂದ ಪಡೆದಿರುವ ವಿನ್‌ಸ್ಟನ್ ಚರ್ಚಿಲ್ಲರು ಬುದ್ಧಿಶಕ್ತಿ, ಮುತ್ಸದ್ದಿತನ, ಕಾರ್ಯದಕ್ಷತೆ,ಮತ್ತು ದೂರದೃಷ್ಟಿಯನ್ನು ಎರಡು ಶತಮಾನಗಳ ಹಿಂದೆ ಫ್ರೆಂಚ್ ಅರಸ ಹದಿನಾಲ್ಕನೇ ಲೂಯಿಯ ಉಪಟಳದಿಂದ ಯುರೋಪನ್ನು ರಕ್ಷಿಸಿದ ಮಹಾವೀರ ಮುತ್ಸದ್ದಿ ಮತ್ತು ಮೇಧಾವಿ ಮಾರ್ಲ್‌ಬರೋವರವರು. ಇವನ ಮೊಮ್ಮಗನ ಮಗ ವಿನ್‌ಸ್ಟನ್ ಚರ್ಚಿಲ್ಲರು. ಚರ್ಚಿಲ್ಲರ ತಾಯಿ ಅಮೇರಿಕದ ಪತ್ರಿಕಾವ್ಯಾಪಾಲಕನೊಬ್ಬನ ಪುತ್ರಿಯು. ಹೀಗೆ ಹೊಸ ಮತ್ತು ಹಳೆ ಲೋಕಗಳ ರಕ್ತಗಳು ಸಮ್ಮಿಶ್ರವಾಗಿವೆ ಚರ್ಚಿಲ್ಲರಲ್ಲಿ.

## ಸ್ವತಂತ್ರ ತೇಜಸ್ವಿ ವ್ಯಕ್ತಿತ್ವ

ತನ್ನದೇ ಆದ ಅತ್ಯಂತ ತೇಜಸ್ವಿ ವ್ಯಕ್ತಿತ್ವ ವಿನ್‌ಸ್ಟನ್ ಚರ್ಚಿಲ್ಲರದು. ಪಕ್ಷಗಳ ಕಟ್ಟುಕಟ್ಟುಗಳಿಗೆ ಕಣ್ಮುಚ್ಚಿ ತಲೆಬಾಗುವವರು ಅವರಲ್ಲಿ ಅವುಗಳ ಸೂತ್ರಚಾಲನೆ, ನಟನೆ, ವಂಚನೆಗಳಲ್ಲಿ ಭಾಗವಹಿಸುವವರಲ್ಲ. ಆದುದರಿಂದಲೇ ಯುದ್ಧಾರಂಭವಾಗುವ ಮೊದಲು ಯಾವ ಪಕ್ಷದ ಬೆಂಬಲವು ಅವರಿಗಿರಲಿಲ್ಲ. ಅವರು ನಂಬಿಗೆಗೆ ಪಾತ್ರರಲ್ಲೆಂದು ಪರಿಗಣಿಸಲ್ಪಟ್ಟಿದ್ದರು. ಆದರೆ ಈಗ ಇಡೀ ರಾಷ್ಟ್ರದ ಏಕಕಂಠವಾದ ಪ್ರಶಂಸೆಗೆ ಪಾತ್ರರಾಗಿರುವರು. ಎಲ್ಲಾ ಪಕ್ಷಗಳವರೂ ಅವರ ಕುರಿತು ಅತ್ಯಂತ ಮೆಚ್ಚಿಗೆ ಸೂಚಿಸುತ್ತಿರುವರು.


**ಪ್ರಬಂಧ ಮುಕ್ತಾವಳಿ**

ಹೊಸ ತರದ ಗ್ರಂಥ) (ಬೆಲೆ ಹನ್ನೆರಡಾಣೆ ಮುದ್ದಾದ ಮುದ್ರಣ] [೨೮೨ ಪುಟಗಳು

ಕನ್ನಡ ಸಾಹಿತ್ಯ ಜ್ಞಾನಾಭಿಲಾಷಿಗಳಿಗೂ, ಕಾಲೇಜು ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೂ ಅತ್ಯುಪಯೋಗವಾಗಲೆಂದು ಬಹು ಪರಿಶ್ರಮದಿಂದ ಬರೆದಿರುವ ಪ್ರಬಂಧ ಗ್ರಂಥ.

ಭಾಷೆ, ಶೈಲಿ, ರೀತಿ, ವಿಷಯಗಳೆಲ್ಲವೂ ಬಹು ಶ್ಲಾಘನೀಯವಾಗಿವೆ. ಇಂತಹ ಗ್ರಂಥ ಕನ್ನಡದಲ್ಲಿ ಇನ್ನೊಂದಿಲ್ಲ.

ಹನ್ನೆರಡಾಣೆ ಸ್ಟಾಂಪು ಕಳುಹಿಸಬೇಕು. V. P. ಮಾಡಲಾಗುವುದಿಲ್ಲ. ಟ. ಖ. ಉಚಿತ.

**ಉಪಾಧ್ಯಾಯ ಬುಕ್ ಡಿಪೋ,**

**A ಕೆ. ಸ್ಟ್ರೀಟ್, ಬೆಂಗಳೂರು ಸಿಟಿ.**


## ನೂರು ಕುದುರೆ ಶಕ್ತಿಯ ಬುದ್ಧಿಪ್ರಭಾವ

ಇಂಗ್ಲೆಂಡಿನ ಮಾಜಿ ಪ್ರಧಾನ ಮಂತ್ರಿ ಅರ್ಲ್ ಬಾಲ್ಡ್ವಿನರೊಮ್ಮೆ ಉಭಯಸಂಕಟದಲ್ಲಿ ಬಿದ್ದು ತನ್ನ ಸ್ಥಾನಕ್ಕೆ ರಾಜೀನಾಮೆಕೊಡುವುದರಲ್ಲಿದ್ದರು. ಆದರೆ ಚರ್ಚಿಲ್ಲರ ಬಲವಂತದಿಂದ ತನ್ನ ನಿರ್ಧಾರವನ್ನು ಬದಲಿಸಿದರು. "ನಾನು ನನ್ನ ನಿಶ್ಚಯಮಾಡಿದ್ದೆ. ನೂರು ಕುದುರೆ ಶಕ್ತಿಯ ಬುದ್ಧಿಪ್ರಭಾವದ ವಿನ್‌ಸ್ಟನ್ ಬಂದು ಬಲವಂತಗೊಳಿಸಿದಾಗ ನಾನೇನು ಮಾಡಲಿ!" ಎಂದು ಬಾಲ್ಡ್ವಿನರು ತನ್ನೊಬ್ಬ ಮಿತ್ರನಿಗೆ ಹೇಳಿದ್ದರು. ಈ ಸಂದರ್ಭದಲ್ಲಿ ಇದು ಅಕ್ಷರಶಃ ನಿಜವಾದುದು. ಚರ್ಚಿಲ್ಲರು ಬೇಗ್ಗೆ ಬೇಗ ಎದ್ದು ಕೆಲಸಕ್ಕಾರಂಭಿಸಿದರೆ ಮಧ್ಯರಾತ್ರಿ ದಾಟಿ 3 ಘಂಟೆಯವರೆಗೂ ಕೆಲಸಮಾಡುತ್ತಾ ಹೋಗುವುದುಂಟು. ನಡುವೆ, ಹೆಚ್ಚಾಗಿ ಮಧ್ಯಾಹ್ನ ಅರ್ಧಘಂಟೆ ಮಲಗುವರು. ಪುನಃ ಉತ್ಸಾಹದಿಂದೆದ್ದು ಕೆಲಸಕ್ಕೆ ತೊಡಗುವರು. ತನ್ನ ಭಾಷಣಗಳ ಹೆಚ್ಚಿನ ಅಂಶವನ್ನು ಕಂಠಪಾಠ ಮಾಡಿಕೊಳ್ಳುವರು. ಅತಿ ದೊಡ್ಡ ಭಾಷಣಗಳನ್ನು ಕೂಡ ಮೊದಲು ಬಾಯಿಪಾಠಮಾಡಿಕೊಳ್ಳದಿರುವುದಿಲ್ಲ. ತನ್ನ ಕೆಲಸವನ್ನೆಲ್ಲಾ ಸುವ್ಯವಸ್ಥೆಯಿಂದ ನಡಿಸುವರು. ಯಾವ ರೀತಿಯ ಗೊಂದಲಕ್ಕೂ ಎಡೆಗೊಡಲಾರರು.

## ಮಾನವೀಯ ಹೃದಯವುಳ್ಳವರು

ಚರ್ಚಿಲ್ಲರು ಯಾಂತ್ರಿಕ ಮನೋವೃತ್ತಿಯವರಲ್ಲ. ಮಾನವೀಯ ಹೃದಯವುಳ್ಳವರು. "ಚರ್ಚಿಲ್ಲರನ್ನು ಪ್ರಥಮ ಸಲ ನೋಡುವಾಗ ಅವರ ದೋಷಗಳೆಲ್ಲಾ ಎದ್ದು ಕಾಣುತ್ತಿವೆ. ಅನಂತರ ಅವರ ಸದ್ಗುಣಗಳೆಲ್ಲಾ ಒಂದೊಂದಾಗಿ

ತೋರಿಬರುವವು" ಎಂದು ಲೇಡಿಲಿಟ್ಟ ನರು ಬರೆದಿರುವರು. ಇಂದಾದರೂ ಅವರು ಪ್ರಾಣಾಪಾಯವನ್ನು ಧಿಕ್ಕರಿಸಿ, ವಿಮಾನಯುದ್ಧಗಳನ್ನು ಸ್ವತಃ ಪರೀಕ್ಷಿಸುವರು. ವಿಮಾನಧಾಳಿ ಹಾವಳಿಯಾದಲ್ಲಿಗೆ ಹೋಗಿ ಸಂಕಷ್ಟಕ್ಕೊಳಗಾದವರನ್ನು ಸಹಾನುಭೂತಿಯ ಎರಡು ಮಾತುಗಳಿಂದ ಸಂತೈಸುತ್ತಿರುವರು. ಇಟ್ಟಿಗೆ ಕಟ್ಟುವುದು ಮತ್ತು ವಾಟರ್ ಕಲರ್ ಚಿತ್ರ ಬರಿಯುವುದೇ ಚರ್ಚಿಲ್ಲರ ವಿನೋದ ವೃತ್ತಿ. ಈಗಲೂ ಅವರು ಬಿಡುಸಿಕ್ಕಿದಾಗಲೆಲ್ಲ ಇಟ್ಟಿಗೆ ಕಟ್ಟುವುದರಲ್ಲಿ ಮತ್ತು ಚಿತ್ರಬರೆಯುವುದರಲ್ಲಿ ಉಲ್ಲಾಸಪಡುತ್ತಾರೆ. ಚರ್ಚಿಲ್ಲರು ಬೆಕ್ಕಿನ ಮೇಲೆ ಪ್ರೀತಿಯುಳ್ಳವರು. ಅವರು ಕೆಲಸಮಾಡುವಾಗ ನೆಲ್ಸನ್ ಎಂಬ ಅವರ ಪ್ರೀತಿಯ ಕರಿಯ ಬೆಕ್ಕು ಅವರ ಕಾಲಬುಡದಲ್ಲಿ ಮಲಗಿ ಪಾದಗಳ ಮೇಲೆ ವೈಯ್ಯಾರಪಿಕೊಳ್ಳುವುದು. ಚೇಂಬರ್ಲೇನರು ಪ್ರಧಾನಮಂತ್ರಿಗಳಾಗಿದ್ದಾಗ 'ಮ್ಯೂನಿಚ್' ಎಂಬ ಬಿಳಿ ಬೆಕ್ಕು ನಂಬ್ರ 10 ಡೌನಿಂಗ್ ಸ್ಟ್ರೀಟಿನ ಆಫೀಸಿನಲ್ಲಿ ಅವರ ಕಾಲ್ಬುಡದಲ್ಲಿ ಕೂತುಕೊಳ್ಳುತ್ತಿತ್ತು. ಈಗ ಚರ್ಚಿಲ್ಲರು ಪ್ರಧಾನಮಂತ್ರಿಗಳಾಗಿರುವುದರಿಂದ ಅಲ್ಲಿಗೆ ಅವರ ಕರಿಬೆಕ್ಕು ನೆಲ್ಸನ್ ಬಂದಿದೆ. ಮ್ಯುನಿಚ್ ಅಶುಭವನ್ನು ತಂದಿತು. ನೆಲ್ಸನು ಶುಭವನ್ನುಂಟುಮಾಡಲಿರುವುದೋ ನೋಡಲಿದೆ.

---

# ಶ್ರೀ. ಚಂದ್ರಕಲಾ ಸ್ಪರ್ಧೆ ನಂ. 45ರ

**ಬ್ಯಾಂಕಿನಲ್ಲಿ ಮೋಹರಾಗಿದ್ದ ಸರಿಯಾದ ಉತ್ತರ ಮತ್ತು ಬಹುಮಾನ ಪಡೆದವರು.**

**ಎಡದಿಂದ ಬಲಕ್ಕೆ:**—1. ಸುಧಾಕರ. 3. ರೀತಿ. 4. ಆಮೆ. 5. ಗದ್ಯ. 6. ಭಕ್ತಿ. 7. ಗುಟ್ಟು. 9. ಮತ. 11. ವ್ರತಾಚಾರ. 13. ಚೋರ. 14. ಒಲವು.

**ಮೇಲಿನಿಂದ ಕೆಳಕ್ಕೆ:**—1. ಸುರಾ. 2. ರಮೆ. 8. ಚೌಳು. 10. ಆಹಾರ. 12. ದುಂದು.

**ಬಹುಮಾನ ಪಡೆದವರು.**

ಸರಿಯಾದ ಉತ್ತರವು ಯಾರಿಂದಲೂ ಬರಲಿಲ್ಲವಾದ್ದರಿಂದ ಒಂದು ತಪ್ಪಿನ ಉತ್ತರವನ್ನು ಕಳುಹಿಸಿದ ನಾಲು. ಜನರಿಗೆ ತಲಾ ರೂ. 20—0—0ರಂತೆ ಕೊಟ್ಟಿರುತ್ತೆ. M. S. ರಾಜಾರಾವ್, ಚಾಮರಾಜಪುರಂ ಮೈಸೂರು. H. N. ರಾವ್, ಓವರ್‌ಸಿಯರ್. ಶಿವಮೊಗ್ಗ. S. K. ಶ್ರೀಪಾದರಾವ್, ಪಂಡಿತ್, ಕೋಲಾರ. N. S. ಶ್ರೀನಿವಾಸ, ಕಾರ್‌ಸ್ಟ್ರೀಟ್, ಮಂಗಳೂರು. ಎಲ್ಲರಿಗಿಂತಲೂ ಹೆಚ್ಚಿಗೆ ಕೂಪನ್ನು (50) ಕಳುಹಿಸಿದ್ದ. M. S. ರಾಜಾರಾವ್ ಇವರಿಗೆ ಸ್ಪೆಷಲ್ ಬಹುಮಾನ. 10 ರೂ. ಕೊಡಲಾಗಿದೆ.

ಎರಡು ತಪ್ಪಿನ ಉತ್ತರವನ್ನು ಕಳುಹಿಸಿದ್ದ, 10 ಜನರಿಗೆ ತಲಾ ರೂ. 5—0—0ರಂತೆ ಕೊಟ್ಟಿರುತ್ತೆ. ಶ್ರೀ. ಶಾರದಮ್ಮ. B. ರಾಮುಸ್ವಾಮಿ. N. S. ಕೃಷ್ಣರಾವ್, ಬೆಂಗಳೂರು. M. ಸುಬ್ಬಯ್ಯ. ಶ್ರೀ. ರಾಜಮ್ಮ, ಮೈಸೂರು. B. K. ಭಟ್ಟ, ಮದ್ರಾಸ್. S. ರಾಮರಾವ್, ಬಳ್ಳಾರಿ. P. S. ಶಿವರಾಮಯ್ಯ, ರಾಯಚೂರ್. A. K. ಸದಾಶಿವಯ್ಯ, ತಾಡಪತ್ರಿ. H. ಭದ್ರಯ್ಯ, ಹುಬ್ಬಳ್ಳಿ.

ಮೂರು ತಪ್ಪಿನ ಉತ್ತರವನ್ನು ಕಳುಹಿಸಿದ 30 ಜನರಿಗೆ ತಲಾ ರೂ. 1—0—0ರಂತೆ, ಕೊಟ್ಟಿರುತ್ತೆ. P. ರಂಗಾಚಾರ್. N.S. ರಾಮಚಂದ್ರಯ್ಯ. ಶ್ರೀ. ಶಕುಂತಲಾಬಾಯಿ. K. ಕೃಷ್ಣಮೂರ್ತಿ. A. ಶ್ರೀಪಾದರಾವ್. S. ಕಾಶೀಪತಿ, ಬೆಂಗಳೂರು. M. ಸುಬ್ಬರಾವ್. S. ರಾಮಣ್ಣ. ಶ್ರೀ. ಅಂಜನಾದೇವಿ. B. ರುದ್ರಪ್ಪ. K. ಕೃಷ್ಣಮೂರ್ತಿ, ಮೈಸೂರು. S. ರಾಜಣ್ಣ, ಚಾಮರಾಜನಗರ. K. ಮುಕ್ತಾಬಾಯಿ, ಕನ್ನಹಂಗಾಡ್. K. G. ಸುಧಾಕರರಾವ್, ಗುರುವಾಯನ ಕೆರೆ. B. K. ರಾಮಸ್ವಾಮಿ. S. N. ರಾಮಾಚಾರ್. ಶ್ರೀ. ರತ್ನಮ್ಮ, ಹಾಸನ. C. K. ನಾಗಪ್ಪ, ಚಿತ್ರದುರ್ಗ. ಡಿ. ಬಸವಯ್ಯ. N. ಮೂರ್ತಿರಾವ್, ಬಳ್ಳಾರಿ. A. N. ಶ್ರೀಪತಿ. S. ರಾಮಣ್ಣ, ದಾವಣಗೆರೆ. M. ಕೃಷ್ಣಸ್ವಾಮಿ. B. ಸಂಪತ್ತು, ಹರಿಹರ. N. ಸುಂದರರಾವ್, ಕಡೂರು. C. ಭಾಸ್ಕರಯ್ಯ, ಭದ್ರಾವತಿ. K. ನಾರಾಯಣರಾವ್. K. ಶ್ರೀನಿವಾಸರಾವ್, ಅರಸೀಕೆರೆ. H. ಹಿರಣಯ್ಯ, ಮಾಲೂರು. K. ಶ್ರೀನಿವಾಸರಾವ್, ಕಾನ್‌ಕಾನಹಳ್ಳಿ.

**ಮೇಲ್ಕಂಡ ಬಹುಮಾನವನ್ನು ತಾ. 15—10—40ರ ನಂತರ ರವಾನಿಸಲಾಗುತ್ತೆ.** **ಮ್ಯಾ. ಚಂ. ಸ್ಪ**

# ಶ್ರೀ ಚಂದ್ರಕಲಾ ಸ್ಪರ್ಧೆ ನಂ. 46.

ಬೆಂಗಳೂರು ಸಿಟಿ-

| ಎಂಟಾಣೆಗೆ 3 ಕೂಪನ್‌ಗಳು | ದಸರಾ ಸ್ಪೆಷಲ್ **250 ರೂಪಾಯಿಗಳ ಬಹುಮಾನ!** | ಒಂದು ರೂಪಾಯಿಗೆ 7 ಕೂಪನುಗಳು |
|---|---|---|

ಪ್ರಥಮ ಬಹುಮಾನ ರೂ. 100 ಇತರ ಬಹುಮಾನ ರೂ. 100 ಸ್ಪೆಷಲ್ ರೂ. 50.

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರವನ್ನು ಕಳುಹಿಸಿದವರಿಗೆ ಹತ್ತು ರೂಪಾಯಿ ಕೊಡಲಾಗುತ್ತೆ.

ಸರಿಯಾದ ಉತ್ತರವನ್ನು ಕಳುಹಿಸಿದವರಿಗೆ ಇಪ್ಪತ್ತು ರೂಪಾಯಿ ಕೊಡಲಾಗುತ್ತೆ.
ಒಂದು ತಪ್ಪಿನ ಉತ್ತರವನ್ನು ಕಳುಹಿಸಿದವರಿಗೆ ಒಂದು ಪೆನ್ ಕೊಡಲಾಗುತ್ತೆ.

ಸೂಚನೆ— ಈ ಸ್ಪರ್ಧೆಯ ಸರಿಯಾದ ಉತ್ತರವನ್ನು 'ಎ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್' ಬೆಂಗಳೂರು ಸಿಟಿ ಇವರಲ್ಲಿ ಮೊಹರು ಮಾಡಲ್ಪಟ್ಟಿರುತ್ತದೆ. ಅದಕ್ಕೆ ಪ್ರತ್ಯಕ್ಷರವೂ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ ೧ ಮತ್ತು ೨ ತಪ್ಪಿನ ಉತ್ತರಗಳಿಗೆ ಇತರ ಬಹುಮಾನವೂ, ಕೊಡಲ್ಪಡುವದು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತಲೂ ಹೆಚ್ಚಾಗಿದ್ದಲ್ಲಿ, ಬಹುಮಾನವು ಎಲ್ಲರಿಗೂ ಸಮನಾಗಿ ಹಂಚಲ್ಪಡುತ್ತದೆ. ಬಹುಮಾನದ ಹಂಚಿಕೆಯ ವಿಚಾರ ಸ್ಪರ್ಧೆಯ ಮ್ಯಾನೇಜರರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ವಿಧವಾದ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಎಂಟಾಣೆಗಳಿಗೆ 3 ಉತ್ತರಗಳನ್ನೂ 1 ರೂ. ಗೆ 7 ಉತ್ತರಗಳನ್ನೂ ಕಳಿಸಬಹುದು. 3 ಕ್ಕಿಂತ ಕಡಿಮೆ ಉತ್ತರಗಳನ್ನು ಅಂಗೀಕರಿಸುವುದಿಲ್ಲ. ಪ್ರವೇಶ ಧನವನ್ನು ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ಕಳುಹಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಈ ಕೆಳಗಿನ ಕೂಪನ್ನಿನಲ್ಲಾಗಲೀ ಬಿಳಿಯ ಕಾಗದದಲ್ಲಾಗಲಿ, (ಶಾಯಿಯಿಂದ ಚಿತ್ತಿಲ್ಲದಂತೆ) ಬರೆದು ಕಳಿಸತಕ್ಕದ್ದು. ಉತ್ತರಗಳು ತಲಪಲು 13-10-40ನೇ ಭಾನುವಾರ ಕೊನೆಯ ದಿನ. ನಂತರ ಬರುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಇದರ ಸರಿಯಾದ ಉತ್ತರ ಮತ್ತು ಬಹುಮಾನ ಪಡೆದವರ ಹೆಸರೂ ಸಹ 22-10-40ರ ಅಂತರಂಗದಲ್ಲಿ ಪ್ರಕಟಿಸಲ್ಪಡುತ್ತದೆ- ಉತ್ತರಗಳನ್ನು ಕೆಳಗಿನ ವಿಳಾಸಕ್ಕೆ ಕಳಿಸತಕ್ಕದ್ದು. ಪೋಸ್ಟು ಮೂಲಕ ಕಳುಹಿಸುವವರು 13-10-40ನೇ ತಾರೀಕು ಕೂಡಾ ಕಳುಹಿಸಬಹುದು.

| | | | | | | |
|---|---|---|---|---|---|---|
| 1 ಭ | ಜ | ನೆ | | 2 | ದ | 3 ರು |
| | | 4 | | ನ | | |
| ಣಿ | | ಕ್ಷಿ | | ಲು | | ಣಿ |
| | 5 | | 6 | | 7 | |
| 8 | ದ | | ಮ | | ಷ್ಟ | |
| 9 | ವ್ಯ | 10 ತ | | 11 | ಣ | |
| 12 | ಷ್ಟ | | | ಪ್ತಿ | 13 ದೇ | |

**ಎಡದಿಂದ ಬಲಕ್ಕೆ:**-1. ಪ್ರಾರ್ಥನೆ. 2. ಗಿಡಗಳ ಗುಂಪು 8. ಅಹಂಕಾರ 9....ವಿಲ್ಲದ ಕೆಲಸಗಳು ಬಹಳ ಕಾಲ ನಡೆಯಲಾರವು. 11. ಇವಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ. 12. ಸೇವಕನು ಇಂತಹವನಾಗಿರಬಾರದು. 13. ಎಂತಹ ಕಷ್ಟ ಬಂದರೂ.....ತ್ಯಾಗಮಾಡಬಾರದು.

**ಮೇಲಿನಿಂದ ಕೆಳಕ್ಕೆ:**-1. ನಕ್ಷತ್ರಗಳಲ್ಲೊಂದು. 2. ನದಿ. 3. ದೇವಸ್ತ್ರೀಯರಲ್ಲೊಬ್ಬಳು 4. ಇದರ ಬಾಧೆಯನ್ನು ತಡೆಯುವುದು ಕಷ್ಟ. 5. ಮಗು. 6. ಕೆಲವು ಕೆಲಸಗಳು....ವಿಲ್ಲದೆ ನಡೆಯುವುವು. 7. ಇದು ಎಲ್ಲರಿಗೂ ಸಂಭವಿಸುವುದು. 10. ಮಾಡದೆ ಇರುವವರು ವಿರಳ. 11. ಕೆಲವರು ಇದರಿಂದ ದೊಡ್ಡವರೆನಿಸಿಕೊಂಡಿದ್ದಾರೆ.

**ನಮ್ಮ ಏಜಂಟರು:—1 ಬೆಂಗಳೂರು:**-ಮ. ರಾ. H. K. ಮೂರ್ತಿ, ತೆಂಗಿನಕಾಯಿ ವ್ಯಾಪಾರಿ ಮತ್ತು ನ್ಯೂಸ್ ಏಜಂಟ್. 55 ನ್ಯೂಮಾರ್ಕೇಟ್. ಸೇತೂರಾವ್ ಸ್ಟ್ರೀಟ್. **2.** ಎ. ಎ. ಗುಂಡಪ್ಪ S/o M.A. ಆನಂದಾಳ್ವಾರ್, ಜವಳಿವ್ಯಾಪಾರಿ, ಮಂಡ್ಯ. ಇವರಲ್ಲಿ ಕೂಪನನ್ನು ಮತ್ತು ಪ್ರವೇಶಧನವನ್ನು ಕೊಟ್ಟು ರಶೀದಿ ಪಡೆಯಬಹುದು.

**Wanted Agents, Apply for terms.**

ಮ್ಯಾನೇಜರ್: **ಶ್ರೀಚಂದ್ರಕಲಾಸ್ಪರ್ಧೆ,** ೫೫ ನ್ಯೂಮಾರ್ಕೆಟ್, ಸೇತೂರಾವ್‌ಸ್ಟ್ರೀಟ್,.
**ಬೆಂಗಳೂರು ಸಿಟಿ**

# 'ಅಂತರಂಗ'ದ ಅವಲೋಕನ

'ಅಂತರಂಗ'--ಅಖಿಲ ಕನ್ನಡನಾಡಿನ ಪ್ರಸಿದ್ಧಿಯನ್ನು ಅಲ್ಪಾವಧಿಯಲ್ಲಿ ಪಡೆದ ಪತ್ರಿಕೆ ಕೈಬದಲಾವಣೆ ಹೊಂದಿತು; ಹೊಸ ಆಡಳಿತೆಗೆ ಸೇರಿತು. ಕನ್ನಡ ಪತ್ರಿಕೆಗಳ ಚಾಲಕರ ಅನುಭವವೆಂದರೆ ಅದೊಂದು ಸರ್ವ ಸಂಗ್ರಹ ಉಗ್ರಾಣ. ಅಲ್ಲಿ ಕಹಿ, ಸಿಹಿ, ಉಪ್ಪು, ಮೆಣಸು, ಎಲ್ಲಾ ಇದೆ. ಅದು ಅವರ ಖಾಸಗಿ ಭಂಡವಾಳ. ಉಗ್ರಾಣದಲ್ಲಿ ಸಿಹಿ ವಸ್ತುವಿಗಿಂತ ಕಹಿ ಸಾಮಾಗ್ರಿ ಹೆಚ್ಚಿರಬಹುದು; ಉಪ್ಪು ಹುಳಿ ಸಮತೂಕದಲ್ಲಿಲ್ಲದಿರಬಹುದು; ಎಲ್ಲವನ್ನೂ ಸರಿಪಡಿಸಿಕೊಂಡು, ಪಾಕಕ್ಕೆ ತಂದು, ಬಡಿಸುವ ಕೆಲಸ ಚಾಲಕರದು; ರುಚಿನೋಡುವ ಕೆಲಸವಷ್ಟೇ ವಾಚಕರದು. ನಾಸಿಲ್ಲಿ ಮಾಡುತ್ತಿರುವದು ವಾಚಕನ ಕಾರ್ಯ. "ಇಸ್ಸೀ--ಇದು ಹುಳಿನಾರುತ್ತಿದೆ" "ಇಲ್ಲಿ ಈ ಸಾಮಾಗ್ರಿ ಕಡಿಮೆ ಬಿದ್ದಿದೆ" "ಭೇಷ್! ರುಚಿಯೆನ್ನುವದು ಇದಕ್ಕೇನೆ"--ಹೀಗೆಲ್ಲಾ ಉಣ್ಣುವವ ಉಗುಳಿದರೇನೇ ಚಂದ; ಹೊರತು ತಿಂಡಿಯೊಡನೆ ಹೊಟ್ಟೆಯಲ್ಲೇ ಕರಗಿಸಿಕೊಳ್ಳುವದು ಉಣಬಡಿಸಿದವರಿಗೆ ಮಾಡುವ ದ್ರೋಹ. ಈಗಂತೂ ಅಂತರಂಗದ ನವಯುಗ; ಹೊಸ ಅಡಿಗೆವಾಲ ಬಂದ ಸುಮುಹೂರ್ತ; ಪಾಕ ಹೀಗಿರಬೇಕೆಂದು ಹೇಳುವವರಿಗೊಂದು ಸುಸಂದರ್ಭವೆಂತಲೇ ಅದನ್ನು ಉಪಯೋಗಿಸಿಕೊಳ್ಳಬೇಕಾಯಿತು.

### ಅದರ ವೈಶಿಷ್ಟ್ಯ.

ಅಂತರಂಗ ಪತ್ರಿಕೆಯನ್ನು ಕನ್ನಡಿಗರು ಉಪೇಕ್ಷಿಸಿಬಿಡಲಿಲ್ಲ--ಎತ್ತಿಕೊಂಡರು. ಏಕಾಗಿ? ಅದರಲ್ಲೊಂದು ವೈಶಿಷ್ಟ್ಯವಿತ್ತು. ವಾರಪತ್ರಿಕೆ- ಅದರೂ ಪುಸ್ತಕ. ವಾರಪತ್ರಿಕೆ- ಅದರೂ ವರ್ತಮಾನಕ್ಕೆ ಪ್ರಾಧಾನ್ಯತೆಯಿಲ್ಲ, ಮನರಂಜನೆಯೇ ಪ್ರಧಾನ. ಈ ನೂತನತೆಯಿದ್ದ ವಾರಪತ್ರಿಕೆ ಕನ್ನಡನಾಡಿನಲ್ಲಿ ಬೇರೆ ಇಲ್ಲ. ಇನ್ನು ಅದರ ಬಹಿರಂಗ ಅಂತರಂಗರೂಪದ ಮಾತು. ಬಹಿರಂಗದ ವಟ್ಟ್ರಗ, ವೈವಿಧ್ಯತೆಯ ದೃಷ್ಟಿಯಿಂದ ಇಷ್ಟು ಆಕರ್ಷಣೀಯ ಪತ್ರಿಕೆ ಕರ್ನಾಟಕದಲ್ಲಿ ಇಲ್ಲವೇ ಇಲ್ಲ. ಮುಖಪತ್ರಕ್ಕೆ ಹೆಸರಾದ ಪತ್ರಿಕೆಯೇ ಅಂತರಂಗ. ಅದರ ಅಂತರಂಗವೊ? ವಿಷಯಗಳನ್ನು ಕೊಂಡುಹೋದ ಸಾಲುಗಳಾವುವೂ ಕರ್ನಾಟಕಕ್ಕೊಗ್ಗದವುಗಳಲ್ಲ. ಕಥೆ, ವ್ಯಂಗ್ಯ ಬರೆಹ, ನಾಟಕ, ಚುಟುಕು ಸೂಚನೆಗಳು-ಇವೆಲ್ಲವುಗಳಲ್ಲಿ ಜಿನುಗಬೇಕಾದ ಹಾಸ್ಯರಸ-ಇಷ್ಟೂ ಜನತೆಗೆ ಬೇಕು. 'ಪತ್ರಿಕಾಕರ್ತರ ದೃಷ್ಟಿ ಬೇರೆ, ಡಾಕ್ಟರರ ದೃಷ್ಟಿ ಬೇರೆ ಅಲ್ಲ; ಸಮಾಜದಲ್ಲಿ ಕೊಳೆರೋಗಗಳಿಗೆ ಕೊರತೆಯಿಲ್ಲ; ಪತ್ರಿಕೆಗಳವಕ್ಕೆ ಚಿಕಿತ್ಸಾರೂಪದಲ್ಲಿರಬೇಕು' ಎನ್ನುವವಾದವಿದೆ, ತಪ್ಪಲ್ಲ. "ಔಷಧ ಕಹಿ"; 'ಪಥ್ಯ ಕಠಿಣ!' ಎಂಬುದೊಂದು ರೂಢಿ. ಈ 'ಕಹಿ' 'ಕಠಿಣ'ವನ್ನನುಭವಿಸುವದೂ ಸಂಕಟವೇ; ಅದೂ ಒಂದು ಮುಹೂರ್ತದ ರೋಗವೇ. ಆದರೆ ದೊಡ್ಡ ಸಂಕಟನಿವಾರಣೆಗಾಗಿ ಈ ಸಣ್ಣ ಪೇಚಾಟವನ್ನನುಭವಿಸಬೇಕು; ಸಿಹಿ ಪರಿಣಾಮ ಹೊಂದಲು ಕಹಿ ಔಷಧವನ್ನು ಕುಡಿಯಬೇಕು. ನಿಜ. ಔಷಧವನ್ನು ಸಿಹಿಮಾಡಿಕೊಡಲು ಸಾಧ್ಯವಿದ್ದರೆ ಅದೇ ಉತ್ತಮ ರೀತಿಯಲ್ಲವೆ? ಸಕ್ಕರೆ ಮುಚ್ಚಿದ ಕ್ವಿನೀನು ಗುಳಿಗೆಯನ್ನು ಸಂತೋಷದಿಂದಲೇ ನುಂಗಬಹುದಲ್ಲ? ಅದು ಔಷಧವೂ ಸಿಹಿಯೂ ಆಗಿದ್ದರೆ ಎಲ್ಲಾ ಸರಿಹೋದಂತಾಯಿತು; ಸಂತೋಷದಿಂದ ಸವಿಯುವಂತಾಯಿತು. ಅಂತರಂಗಕ್ಕೆ ಕರ್ನಾಟಕದ ಮನ್ನಣೆ ದೊರೆತುದು ಹೀಗೆ. ಇಷ್ಟರಿಂದ ಅದು ಎಲ್ಲಾ ವರ್ಗದವರಿಗೂ ರುಚಿಸಿತೆನ್ನಲು ಸಾಧ್ಯವಿಲ್ಲ. 'ಅಂತರಂಗ'ದ ರುಚಿಯೊಗ್ಗದವರಲ್ಲಿಯೂ 'A' 'B' ಕ್ಲಾಸುಗಳಿವೆ. 'A' ಕ್ಲಾಸಿನವರು ಮರುಕಕ್ಕೆ ಪಾತ್ರರು; 'B' ಕ್ಲಾಸಿನವರು ಮನ್ನಣೆಗೆ ಪಾತ್ರರು. "ಅಂತರಂಗವೇ? ಅದು ಹಾಳು ಹರಟೆಗೆ ಮೀಸಲಿರುವ ಪತ್ರಿಕೆ. ಅದಕ್ಕೊಂದು ಧೋರಣೆಯಿಲ್ಲ" ಎನ್ನುವವರಿದ್ದಾರೆ 'A' ಕ್ಲಾಸಿನವರು. ಕಹಿಯಿದ್ದರೇನೇ ಔಷಧ; 'ಕಠಿಣವಿದ್ದರೇನೇ ಪಥ್ಯ' ಎಂಬ ವಿಶ್ವಾಸವುಳ್ಳವರಿವರು. ಬಿಗುವನ್ನು, ತೂಕವಿದ್ದುದನ್ನು ಮಾತ್ರ ಒಪ್ಪಿಕೊಳ್ಳುವ ದೊಡ್ಡ ಮನುಷ್ಯರ


"COLD KILL" (REGD.)

The latest unrivalled and unfailing alopathic remedy to cure colds. Daily use prevents colds and other Respiratory diseases.

**Annas Twele Only.**
THREE POSTAGE FREE.
SAMPLE AS. FOUR

"COLD-KILL" HOUSE
UDIPI, (India)

ವರ್ಗವಿದು. ಆಗಬಹುದಿತ್ತು-ಪ್ರಪಂಚ ವಿಡೀ ಪವಿತ್ರನೇ ಆಗಿರುತ್ತಿದ್ದರೆ ಅಂಗಳ ಗುಡಿಸುವದೂ ಅಧಿಕ ಪ್ರಸಂಗವೆನ್ನುವದಕ್ಕೇನಡ್ಡಿ? ಮನೆ ಬಿಡದವನು ತುಳಸೀ ಕಟ್ಟೆಯ ಹೊರತು ಅನ್ಯಥಾ ಪ್ರದಕ್ಷಿಣೆ ತೆಗೆಯುವದು ಮಹಾಪರಾಧವೆಂದು ವಾದಿಸುತ್ತಾ ಕುಳಿತಿರಬಹುದು; ಆದರೆ ಮುಂದೆ ನಡೆಯುವ ಪಥಿಕ, ಹಾದಿಯ ದಿನ್ನೆಯ ಸುತ್ತು ತೆಗೆಯಲಾರೆನೆಂದರೆ ಪಥಸಾಗಬೇಕಲ್ಲ! ಈ 'A' ವರ್ಗದವರ ಪ್ರಾಪಂಚಿಕ ಅನುಭವ ಸಾಲದು. ಸಿಹಿಯಿರಲಿ, ಕಹಿಯಿರಲಿ, ಔಷಧವು ಔಷಧವೇ! ಸಿಹಿ, ಕಹಿ ತಿಳಿದವರಿಗೆಲ್ಲಾ ಔಷಧ ಪರೀಕ್ಷೆಯೂ ಇರುವದಿಲ್ಲ.

## ಇದ್ದ ದೋಷಗಳು


ಇನ್ನು 'B' ಕ್ಲಾಸಿನವರ ಮಾತು ಇವರ ವಿಮರ್ಶೆಗೆ ಬೆಲೆಯಿದೆ. "ಧೋರಣೆಯೇನೋ ಸರಿ; ಆದರೆ ವಿನೋದ-ವಿಮರ್ಶೆ, ಟೀಕೆ—ಇವೆಲ್ಲಾ ಮೇಲ್ಮಟ್ಟದಲ್ಲಿರಬೇಕು ಟೀಕೆಯು ಮಾರ್ಗದರ್ಶಕನ ಕೈದೀವಿಗೆಯಂತೆ ಹಿಡಿದ ಹಾದಿಯ ದಿಕ್ಕಿಗೆ ಬೆಳಕು ಬೀರಬೇಕು; ಪಾತ್ರಿಯ ಕೈದೀವಟಿಗೆಯಿಂದ ತನ್ನದೆಯನ್ನು ತಾನೇ ಸುಡಬಾರದು ಅಂದರೆ ವಿಮರ್ಶೆಯು ಸಂಬಂಧಪಟ್ಟ ವಿಷಯದ ಕೊರತೆಯನ್ನು ತೋರಿಸುವಂತಿರಬೇಕು ಹೊರತು ವಿಮರ್ಶಕನ ಸ್ವಭಾವ ಕಳತೆಯನ್ನೇ ಪ್ರದರ್ಶಿಸುವಂತಿರಬಾರದು. ನಗುವ ಬಾಯಿ ಉಗುಳು ಚೆಲ್ಲಬಾರದು" ಎಂದಿವರ ವಾದ ಇದು ಔಷಧದ ರುಚಿನೋಡಿಯಲ್ಲ, ಗುಣನೋಡಿ ಕಟ್ಟಿದ ಬೆಲೆ ಬಿಗುವು ಲಘುವನ್ನು ತೂಗುವ ಸರಿಯಾದ ತಕ್ಕಡಿಯೆಂದರೆ ಇದೇ. ಯಥಾರ್ಥವಾದರೆ ಅಂತರಂಗವು ಈ ತನಕ ಇಂತಹ ಆಕ್ಷೇಪಕ್ಕೆ ಅವಕಾಶವಿತ್ತಿದೆ. ಹಾಸ್ಯ, ಅಪಹಾಸ್ಯ, ಸರಸಟೀಕೆ-ಇವುಗಳಲ್ಲಿ ತಿರುಳು ತುಂಬಿಸುವದ ಖಂಡಿತೋಕ್ತಿಯೊಳಗೆ ತುಂಬಿಸುವುದಕ್ಕಿಂತ ಕಷ್ಟ; ಅಂತೆಯೇ ಅದರ ಪರಿಣಾಮವೂ ವಿಶೇಷ. ಸ್ಪಷ್ಟಬೋಧನೆಯು ಹೊರ ಬೀಳುವ ಸ್ಥಳಕ್ಕಿಂತಲೂ ಆಳದಲ್ಲಿ ಪರಿಹಾಸ್ಯದ ಉಗಮಸ್ಥಾನವಿದ್ದರೇನೆ ಅದು ತಿಳಿಯಾಗಿರುತ್ತದೆ ಅದರಲ್ಲಿ ರಸ ತುಂಬಿರುತ್ತದೆ. ಆಕಾಶನೋಡಿ ನಡೆದು ಜಾರಿಬೀಳುವವನ್ನು ಕಂಡಾಗ ಜೇಡವೆಂದರೂ ಫಕ್ಕನೆ ನಗುಬರುತ್ತದೆ. ಇಂಥವನಿಗೆ "ಕೋಳೀ ಪಿಳ್ಳೆಯಂತೆ ಮೇಲೆ ನೋಡಿದಿಯಾಕೆ? ಗಿಡುಗ ಎತ್ತಿಕೊಂಡು ಹೋದೀತೆಂಬ ಭಯವೆ?" ಎನ್ನುವದು ಒಂದುವರ್ಗದ ಪರಿಹಾಸ್ಯ. "ರಸ್ತೆನಡೆಯುವವನು ರಸ್ತೆಯನ್ನೇ ನೋಡಬೇಕು ಹೊರತು ವೈಮಾನಿಕನಂತೆ ಆಕಾಶ ನೋಡುವದೇ?" ಎನ್ನುವದು ಮತ್ತೊಂದು ವಿಧದ ಹಾಸ್ಯ. ಮೊದಲನೆಯದು ಕೆಳತರಗತಿಯ ವಿನೋದ; ಜಾರಿ ಬಿದ್ದವನಿಗೆ ಮತ್ತೊಂದು ಹೊಡೆತ;ಅವನನ್ನಲ್ಲಿಯೇ ಕುಗ್ಗಿಸಿಬಿಡುವ ವಿಕಟ ಹಾಸ್ಯವಿದು. ಇಂತಹ ವಿಮರ್ಶಕನ ಮೇಲೆ ತಪ್ಪಿಬಿದ್ದವ ಮುನಿಯ ಬಹುದು. ಎರಡನೆಯ ಹಾಸ್ಯದಲ್ಲಿಬೋಧನೆಯಿದೆ. ಆದನ್ನವ ಅಂಗೀಕರಿಸಿದರೆ ಮುಂದೆ ಜಾರಿಬೀಳದಂತಾದರೂ ಆಗಬಹುದು. ಪತ್ರಿಕೆಗಳ ವಿನೋದದಲ್ಲಿ ಇಂತಹ ಘನತೆಯಿರಬೇಕು. ಅಂತರಂಗ ಪತ್ರಿಕೆಯು ತನ್ನಲ್ಲಿ ತುಂಬಿಸಿಕೊಳ್ಳಬೇಕಾಗಿರುವ ಅಂಶವೆಂದರೆ ಇದೇ.

ಅಂತೂ ಹೊಸ ಚಾಲಕರಿಗೆ ಪತ್ರಿಕೆಯೊಂದಿಗೆ ಪಾಠವೂ ದೊರೆತಿದೆ. ಈ ಲೇಖನದಲ್ಲಿ ಎತ್ತಿಕೊಂಡ ಗತಕಾಲದ ಗುಣ ದೋಷಗಳು ಈ ಅಧ್ಯಾಯಾರಂಭದ ಕಾಲದಲ್ಲಿ ಸ್ಪಷ್ಟವಾಗಿ ಅವರ ಕಣ್ಣಮುಂದಿವೆ. ಇದು ಈ ತನಕ ಅದರ ಮುಖ್ಯ ಸಂಪಾದಕರಾಗಿ ನಡೆಯಿಸಿಕೊಂಡು ಬಂದಿದ್ದ ಶ್ರೀ ಪಣಿಯಾಡಿಯವರ ದಾರ್ಢ್ಯತೆಗೊಂದು ನಿದರ್ಶನ. ಕಾರ್ಯದ ಕೊನೆಯ ಪರಿಣಾಮವನ್ನು ಆದಿಯಲ್ಲೇ ಊಹಿಸಲು ಬರುವದಿಲ್ಲ. ಆದರೆ ನುಸುಳಿಕೊಂಡು ಹೋಗುವುದಕ್ಕಿಂತ ಶ್ರೀ. ಪಣಿಯಾಡಿಯವರಂತೆ ಭೇದಿಸಿಕೊಂಡು ಹೋಗುವುದು ವಾಸಿ. ಅವರು ಬಿಡಿಸಿಟ್ಟ ಹಾದಿ ಇನ್ನೊಬ್ಬ ಪಥಿಕನಿಗಾದರೂ ಸುಗಮವಾಗುವದು. ಇದ್ದ ತಪ್ಪು ಅಡಗಿ ಕುಳಿತಿರದೆ. ನಡುವೆ ತಿದ್ದಲನುಕೂಲವಾಗುವಂತೆ ಎದ್ದು ನಿಲ್ಲುವದು. ಅಂತರಂಗದ ಹೊಸ ವ್ಯವಸ್ಥಾಪಕರಿಗೆ, ಹಿಂದಿನವರ ಪ್ರಯತ್ನದ ಫಲವಾಗಿ ಈ ಅನುಕೂಲತೆಯೂ ದೊರೆತಿದೆ. ಸರಿಯಾದುದನ್ನು ಚುನಾಯಿಸುವದರಲ್ಲಿ, ತಪ್ಪನ್ನು ತಿದ್ದಿಕೊಳ್ಳುವದರಲ್ಲಿ, ಇಂದಿನ ಚಾಲಕರು ಸ್ವತಃ ಚತುರರು ಆದ್ದರಿಂದ ಅಂತರಂಗದ ಸರ್ವತೋಮುಖ ಅಭಿವೃದ್ಧಿಯನ್ನು ನಿರೀಕ್ಷಿಸುವದಕ್ಕೇನಡ್ಡಿ?

—ಎಂ. ವಿ. ಹೆಗ್ಡೆ


# ಕೊಕ್ಕೋಕ ಕಳಾಶಾಸ್ತ್ರ

**64 ರಹಸ್ಯ ಚಿತ್ರಪಟಗಳು ಸಹ ರೂ. 1.**



ಇದರಲ್ಲಿ ಸ್ತ್ರೀಪುರುಷರನ್ನು ಪ್ರೀತಿಸುವ ರಹಸ್ಯಗಳು, ಮುದ್ದಿಡುವ ವಿಧಗಳು, ಆಲಿಂಗನ ಮಾಡುವ ರೀತಿಗಳು, ಕನ್ಯೆಗಳ ಪ್ರೇಮ, ಮತ್ತು ಸಂಯೋಗಕಾಲದ ಮರ್ಮಗಳು, ಶೃಂಗಾರ ರಹಸ್ಯಗಳು, ನಕ್ಷೆಗಳು ಸಹ ಹೇಳಿವೆ. ಇದು ವರೆಗೆ ಇಂಥಾ ಬಹಿರಂಗವಾದ ಪುಸ್ತಕವು ಯಾರಿಂದಲೂ ಪ್ರಚುರಿಸಲ್ಪಡಲಿಲ್ಲ.

264 ಪುಟಗಳುಳ್ಳ ದೊಡ್ಡ ರಹಸ್ಯ ಪುಸ್ತಕ. ಕ್ರಯ ರೂ. 1 ಪೋಸ್ಟುಚಾರ್ಜು 3 ಆಣೆ.

**ಸರಸ್ವತಿ ಬುಕ್ ಡಿಪೋ,** ಅರುಣಾಚಲ ಮೊದಲಿ ಬೀದಿ, (A)G.T. ಮದ್ರಾಸ್.

# ವಾರದ ಭವಿಷ್ಯ

ತಾರೀಕು ೨೪-೯-೧೯೪೦ರಿಂದ — ೩೦-೯-೧೯೪೦ರ ವರೆಗೆ.

ಜ್ಯೋತಿಷ್ಕರು:-

**ಬಾಲಭಾಸ್ಕರರು.**

**ಮೇಷ**— ಬಂಧುಬಳಗದವರ ಮತ್ತು ಮಿತ್ರವೃಂದದ ಸಹಾಯದಿಂದ ನಿಮ್ಮ ಇಷ್ಟಾರ್ಥವು ಅವಿಚ್ಛಿನ್ನವಾಗಿ ಸಿದ್ಧಿಸುವಂತಿದೆ. ಶತ್ರುಭಯದಿಂದಲೂ ಗೃಹತಾಪತ್ರಯಗಳಿಂದಲೂ ದೇಹಾಲಸ್ಯದಿಂದಲೂ ಮುಕ್ತರಾದ ನಿಮಗೆ ಶ್ರಮಕ್ಕೆ ತಕ್ಕ ಫಲವೂ ಸ್ಥಾನಮಾನವೂ ದೊರೆಯಲಿದೆ. ಆರ್ಥಿಕ ಭಾಗದಲ್ಲಿ ಸಂತೃಪ್ತರಾಗುವಿ. ಲೇಖಕರಿಗೂ ಶ್ರಮಜೀವಿಗಳಿಗೂ ಅತಿವ್ಯಯವೂ ಪ್ರಿಯಜನವಿಯೋಗವೂ ಪ್ರಾಪ್ತವಾಗುವಂತಿದೆ. ವಾರಾಂತ್ಯದ 5 ದಿನಗಳು ಪ್ರತಿಕೂಲಗಳಾಗಿ ಪರಿಣಮಿಸಲಿವೆ.

**ವೃಷಭ**—ಕುರುವಿನ ಮೇಲೆ ಬೊಕ್ಕೆಯೆದ್ದಂತೆ ಮೊದಲೇ ಸಾಂಸಾರಿಕ ತಾಪತ್ರಯದಿಂದ ಬಳಲುತ್ತಿದ್ದ ನಿಮಗೆ ಮತ್ತೂ ಮತ್ತೂ ಆಪತ್ತುಗಳು ಹೆಚ್ಚುತ್ತಲೇ ಹೋಗುತ್ತಿವೆ. ಪ್ರತಿಯೊಂದು ಕಾರ್ಯದಲ್ಲೂ ನಿಮ್ಮಿಚ್ಛೆಗೆ ವಿರೋಧವಾಗಿಯೇ ಫಲವು ಸಿಗಲಿದೆಯಾದ ಕಾರಣ ಉದ್ಯೋಗದಲ್ಲಿ ವಿರಕ್ತಿಯು ಹೆಚ್ಚುವದು. ಹಣದ ಅಡಚಣೆಯು ಬಹಳೇ ವೃದ್ಧಿಯಾಗುವದು. ಅಧಿವ್ಯಾಧಿಗಳಿಂದ ಪೀಡಿತರಾದ ನಿಮಗೆ ಕಿಂಚಿತ್ತೂ ಮನಶ್ಶಾಂತಿಯಿರದು. ಆದರೂ ತಾ. 26, 27, 28 ಈ ಮೂರು ದಿನಗಳಲ್ಲಿ ಪ್ರಯತ್ನಿಸಿದರೆ ಇಷ್ಟವನ್ನು ಹೊಂದಬಹುದು.

**ಮಿಥುನ**—ಹೆರವರ ಮಾತಿಗೆ ಕಿವಿಗೊಟ್ಟು ವೃಥಾ ಧನವ್ಯಯ ಮಾನಕ್ಷಯಾದಿಗಳಿಗೆ ಗುರಿಯಾಗುವ ಸಂಭವವಿದೆ ನಿಮಗೀವಾರದಲ್ಲಿ. ಆದಕಾರಣ ಪ್ರತಿಯೊಂದು ವಿಚಾರದಲ್ಲೂ ಚೆನ್ನಾಗಿ ಸ್ವಯಂ ಪರಿಶೀಲಿಸಿ ಮುಂದರಿಯಿರಿ. ಹಾಳಿದವ ಬಾಳಿಯಾನು ಎಂಬ ನ್ಯಾಯದಂತೆ ತಾಳ್ಮೆಯಿಂದಿದ್ದರೆ ನಿಮಗಾವ ತರದ ಹಾನಿಯೂ ಆಗುವಂತಿಲ್ಲ. ಖರ್ಚಿಗಿಂತ ಉತ್ಪತ್ತಿ ಅಧಿಕವಾಗಿರುವದು. ರಾಜಕೀಯ ವಿಚಾರದಿಂದ ದೂರವಿರುವದು ಲೇಸು. ತಾ. 24, 25, 29, 30 ಶುಭಕರಗಳಾಗಿವೆ.

**ಕರ್ಕಾಟಕ**— ಮಾಡಿದ ಪ್ರಯತ್ನವೆಂದೂ ವ್ಯರ್ಥವಾಗಲಾರದು. ಆಯವ್ಯಯಗಳು ಸಮಾನವಾಗಿ ನಿಲ್ಲುವವು. "ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ" ಎಂಬ ಲೋಕೋಕ್ತಿಯಂತೆ ಮನೋವಾಕ್ಕಾಯಗಳಲ್ಲಿ ಭಿನ್ನಭಿನ್ನ ರೀತಿಯಿಂದ ವರ್ತಿಸುವ ನಿಮಗೆ ಗುರುಹಿರಿಯರಲ್ಲೂ ಅಧಿಕಾರಿವರ್ಗದವರೊಡನೆಯೂ ವಿರೋಧವುಂಟಾಗುವುದು. ತಾ. 26, 27, 28 ಈ ದಿನಗಳು ಭೋಗೇಚ್ಛೆಗಳಿಗೆ ಅತ್ಯನುಕೂಲವಾಗಿರುವವು.

**ಸಿಂಹ**— ವಿದ್ಯಾಬುದ್ಧಿಗಳ ಪರಿಶ್ರಮದಿಂದ ದುಡಿದ ಧನವು ಒಂದಿಷ್ಟೂ ಉಳಿಯಲಾರದು. ಗೃಹೋಪಕರಣ ದೇಹಾಲಸ್ಯ ಕೋರ್ಟು ಕೆಲಸ ಇತ್ಯಾದಿಗಳಿಗೆ ಹಣವು ಹಂಚಿಹೋಗುವದು. ಮನಸ್ಸಿನಲ್ಲಿ ಭೀರುತ್ವವು ಅಧಿಕವಾಗುವುದರಿಂದ ಕೆಲವೊಂದು ಕಾರ್ಯಗಳಲ್ಲಿ ಪರಾಭವವುಂಟಾದೀತು. ಅನುದಿನದ ಖರ್ಚುವೆಚ್ಚಗಳಿಗೆ ಏನೂ ಕೊರತೆಯುಂಟಾಗದು. ತಾ. 24, 25, 29, 30 ಅನುಕೂಲಗಳಿವೆ.


**ತಾರುಣ್ಯ ಮತ್ತು ಸೌಂದರ್ಯ**

ನಮ್ಮ ಕೆಳಗಿನ ಪುಸ್ತಕವನ್ನೋದಿದರೆ ಇವನ್ನು ಪಡೆಯಬಹುದು.

**ಕಾಮಶಾಸ್ತ್ರ**

ಆಯುರಾರೋಗ್ಯ ಸಂಪದಭಿವೃದ್ಧಿಗಳಿಗೆ ಇದೊಂದು ಕೈದೀವಿಗೆ.

ನೀವಿದನ್ನೋದಿಲ್ಲವಾದರೆ ನಮಗೊಂದು ಕಾರ್ಡು ಬರೆಯಿರಿ.

ಅಂಚೆವೆಚ್ಚವಿಲ್ಲದೆ ಧರ್ಮಾರ್ಥ ಬರುತ್ತದೆ.

**ಆತಂಕನಿಗ್ರಹ ಫಾರ್ಮಸಿ,**

**A ೬೪, ಚಿಕ್ಕಪೇಟೆ, ಬೆಂಗಳೂರು.**


**ಕನ್ಯಾ**—ಸದ್ಯ ನಿಮ್ಮ ಮೇಲೆ ಶುಕ್ರನನ್ನು ಬಿಟ್ಟು ಮಿಕ್ಕುಳಿದ ಗ್ರಹರೆಲ್ಲರೂ ವಕ್ರದೃಷ್ಟಿಯನ್ನು ಬೀರಿರುವುದರಿಂದ ಕಾಲಯಾಪನೆಯು ಬಹಳ ಕಷ್ಟಕ್ಕೆ ಬಗಲಿದೆ. ಅನೈಚ್ಛಿಕ ಪ್ರವಾಸ ಅತೀವ ದೇಹಾಲಸ್ಯ ಪತ್ನೀಪುತ್ರರ ವಿರಹನಿಷ್ಠುರ ಭಾಷಣದಿಂದಾಗಿ ಹಲವರಲ್ಲಿ ಕಲಹ, ಆಕಸ್ಮಿಕ ಅಪಘಾತ ಇತ್ಯಾದಿಗಳು ಸುತ್ತಲಿಂದಲೂ ನಿಮ್ಮನ್ನು ಪೀಡಿಸುತ್ತಲಿವೆ. ವಾಣಿಜ್ಯ, ಕೈಗಾರಿಕೆಯೇ ಪ್ರಧಾನವಾದ ಉದ್ಯೋಗವುಳ್ಳವರಿಗೆ ವಾರಾದಿಯ 5 ದಿನಗಳು ಶುಭಕರಗಳು.

**ತುಲಾ**—ಗುರ್ವನುಗ್ರಹವೊಂದಲ್ಲದಿರುತ್ತಿದ್ದರೆ ಸದ್ಯ ನಿಮ್ಮ ಪರಿಸ್ಥಿತಿಯು ತುಂಬಾ ಚಿಂತಾಜನಕವಾಗುತ್ತಿತ್ತು. ವ್ಯಯಸ್ಥಾನದಲ್ಲಿ ಗ್ರಹನಿಕರವೇ ತುಂಬಿರುವುದು. ಆದಕಾರಣ ಕರ್ಮಭ್ರಷ್ಟರಾಗಿರತಕ್ಕವರು ಹೆಚ್ಚಿನ ನಷ್ಟಕ್ಕೊಳಗಾಗುವರು. ಶತ್ರುಜನರಿಂದ ಪರಾಭವವೂ ದೇಹದಲ್ಲಿ ಅನಾರೋಗ್ಯವೂ ದಿನೇ ದಿನೇ ಹೆಚ್ಚಲಿದೆ. ಸಮುದ್ರದಲೆಗಳಂತೆ ಒಂದರ ಹಿಂದೆ ಮತ್ತೊಂದು ಈ ರೀತಿ ಆಪತ್ತುಗಳು ಬಂದರೂ ಅವುಗಳಿಂದ ಪಾರಾಗಲು ಬೇಕಾದ ಶಕ್ತಿ ನಿಮಗಿರುವುದು. ತಾ. 24, 25 ಅತೀವ ಹಾನಿಕರ.

**ವೃಶ್ಚಿಕ**—ಸುರಗುರುಗಳು ವಿಪರೀತವಾಗಿದ್ದರೂ ಇತರ ಎಲ್ಲಾ ಗ್ರಹರ ಕೃಪೆಗೆ ಪಾತ್ರರಾದ ನೀವು ಸಕಲ ವಿಭಾಗದಲ್ಲೂ ತೃಪ್ತರಿರುವಿರಿ. ಆರೋಗ್ಯವೂ ಉತ್ತಮವಾಗಿರುವುದು. ನೆನಸಿದ ಕಾರ್ಯಗಳು ನನಸಾಗಿ ಪರಿಣಮಿಸುವವು. ಸಂಪತ್ಸಮೃದ್ಧಿಯಿಂದಲೂ ಪರಿಜನ ಬಾಹುಲ್ಯದಿಂದಲೂ ನಿಶ್ಚಿಂತೆಯಿಂದ ವಿಹರಿಸತಕ್ಕ ನಿಮಗೆ ಅಚಿಂತ್ಯವಾದೊಂದು ಆಧಿಯು ಇದ್ದೇ ಇರುವುದು. ತಾ. 29, 30 ಅತ್ಯುತ್ತಮ.

**ಧನು**—ನೌಕರಿವ್ಯಾಪಾರ, ಉದ್ಯೋಗಾದಿಗಳಲ್ಲಿ ನಿಶ್ಚಿಂತರಿರುವಿರಿ. ಕೋರ್ಟು ಕಾರ್ಯವು ಇಷ್ಟದಂತೆ ನೆರವೇರಲಿದೆ. ಸಾಂಸಾರಿಕ ಸುಖವೂ ಗೃಹಪರಿವಾರವೂ ಪೂರ್ಣವಾಗಿರುವುದಾದರೂ ಸೇವಕಾಧಿಕಾರಿಗಳಲ್ಲೂ ತಂದೆಮಕ್ಕಳಲ್ಲೂ

ಪರಸ್ಪರ ವೈಮನಸ್ಸುಂಟಾಗಲಿದೆ. ವಿದ್ಯಾರ್ಥಿಗಳೂ ಶ್ರಮಜೀವಿಗಳೂ ಸುಖದಿಂದ ಕಾಲ ಕಳೆವರು. ತಾ. 26ರಿಂದ ವಾರಾಂತ್ಯದ ವರೆಗೂ ಜಾಗರೂಕತೆಯಿಂದಿರಿ.

**ಮಕರ**—ತಾನೊಂದು ಎಣಿಸಿದರೆ ದೈವವು ಬೇರೊಂದನೆಣಿಸಿತು. ಎಂಬ ಗಾದೆಯಂತೆ ನೀವೊಂದು ಫಲಾಪೇಕ್ಷೆಯಿಂದ ಕಾರ್ಯೋದ್ಯುಕ್ತರಾದರೆ ಅದು ವಿಪರೀತದಲ್ಲಿ ಪರ್ಯವಸಾನ ಹೊಂದಿ ನಾನಾರೀತಿಯ ಕಷ್ಟನಷ್ಟಗಳಿಗೆ ನಿಮ್ಮನ್ನು ಗುರಿಮಾಡುವುದು. ದೈವಬಲದಿಂದ ಸಂಪೂರ್ಣ ಮುಕ್ತರಾದ ನಿಮಗೆ ಬಂಧುಮಿತ್ರರಲ್ಲೂ ಪತ್ನೀಪುತ್ರರಲ್ಲೂ ಕಲಹ, ವಿಶೇಷತಃ ಸ್ತ್ರೀಯರಿಂದ ಅನಿಷ್ಟಾಪತ್ತುಗಳು ಬರುವವು. ಆಧಿಯಿಂದುಂಟಾದ ವ್ಯಾಧಿಯು ಹೆಚ್ಚಾಗಿ ಪೀಡಿಸುವದು. ತಾ. 29, 30 ಅತೀವ ಕಷ್ಟಕರಗಳಾಗಿವೆ.

**ಕುಂಭ**—ಗೃಹಚ್ಛಿದ್ರದಿಂದ ಕಲುಷಿತ ಮನಸ್ಕರಾದ ನಿಮಗೆ ಕೈಹಿಡಿದಾಕೆಯಿಂದಲೂ ನೆಮ್ಮದಿಯಿರದು. ನಿಮ್ಮ ಉದ್ಯಮಕ್ಕೆ ಶತ್ರುಜನರು ಬಹುತೆರದಿಂದ ವಿಘ್ನವನ್ನಾಚರಿಸುವರು. ಧನಮಾನಗಳಿಗೆ ಕೊರತೆಯುಂಟಾಗುವುದಲ್ಲದೆ ಆಕಸ್ಮಿಕ ಅಪಘಡಗಳೂ ಪ್ರಾಪ್ತವಾಗಬಹುದು. ಉಷ್ಣವಾತ ಸಂಬಂಧದಿಂದ ಅನಾರೋಗ್ಯವೂ ಪ್ರಾಪ್ತವಾಗಲಿದೆ. ತಾ. 26ರಿಂದ ವಾರಾಂತ್ಯದ ವರೆಗಿನ ದಿನಗಳು ಕಿಂಚಿದನುಕೂಲಕಾರಿಗಳಿರುವುದರಿಂದ ಶ್ರಮಜೀವಿಗಳಿಗುತ್ತಮ.

**ಮೀನ**—ವ್ಯವಹಾರಜ್ಞರಾದ ನೀವು ಬಂಧುಮಿತ್ರರ ಸಹಾಯದಿಂದ ಹಲಕೆಲವು ಕಾರ್ಯಗಳನ್ನು ಸಾಧಿಸುವಿರಿ. ತತ್ಫಲವನ್ನೂ ಹೊಂದುವಿರಿ. ಆದರೆ ಹಣದ ಅಡಚಣೆಯು ವಿಶೇಷವಾಗಿರತಕ್ಕ ನಿಮಗೆ ದುಡಿದುದು ಸಾಲದೆ ಸಾಲಮಾಡಬೇಕಾದ ಪ್ರಸಕ್ತಿ ಬರಲಿದೆ. ದೇಹಾಲಸ್ಯ, ಪ್ರವಾಸ, ಸ್ವಸ್ತ್ರೀಕಲಹಾದಿಗಳಿಂದ ಮನಶ್ಶಾಂತಿಯಿರದು. ವಾರದಿಯ 5 ದಿನಗಳಲ್ಲಿ ಆಪ್ತಜನರಲ್ಲೂ ವೈಮನಸ್ಸು, ಪರಪೀಡೆಯಿಂದ ಕಾರ್ಯಹಾನಿ ಆಗಲಿದೆ.

---

(೧೨ನೆ ಪುಟದಿಂದ)

ಚಳವಳಿಯು ಆರಂಭವಾಗಿದ್ದಿತು. ಫ್ರಾನ್ಸಿನ ಒಂದು ಸಂಸ್ಥೆಯು ಈ ರೀತಿ ಪ್ರಕಟಿಸಿದ್ದಿತು. ಮುತ್ತುಕೊಟ್ಟರೆ ಕೂಡಲೇ ಅದನ್ನು ಹಿಂದಿರುಗಿಸಿ ಬಿಡಿ. ಅಂದರೆ ಒಬ್ಬನು ಚುಂಬಿಸಿದ ಕೂಡಲೆ, ಇನ್ನೊಬ್ಬನು ಮೊದಲನೆಯವನನ್ನು ಚುಂಬಿಸಬೇಕು. ಇದರಿಂದ ಇತರರ ತುಟಿಯ ಮೇಲೆ ಕ್ರಿಮಿಗಳನ್ನು ಅಂಟಿಸಿದ್ದವನಿಗೇನೇ, ಅವು ಹಿಂದಿರುಗಿ ಹತ್ತಿಕೊಳ್ಳುವುವು.

**"ಮೊದಲೇ ಯೋಚಿಸಿರಿ"**

ಎಂದು ರಷ್ಯದ ಸರಕಾರವು 1929ರಲ್ಲಿ ಜಾಹೀರಾತನ್ನು ಪ್ರಕಟಿಸಿದ್ದಿತು. ವಿಯನ್ನದ ಆರೋಗ್ಯ ಶಾಖೆಯವರು ಇದನ್ನು ಪೂರ್ತಿಯಾಗಿ ನಿಲ್ಲಿಸದಿದ್ದರೂ, ತುಟಿಗಳನ್ನು ಚುಂಬಿಸುವುದಕ್ಕೆ ಪ್ರತಿಯಾಗಿ, ಕುತ್ತಿಗೆ ಅಥವಾ ಶರೀರದ ಇತರ ಭಾಗಗಳನ್ನಾದರೂ ಚುಂಬಿಸಿರೆಂದು ಜನರಿಗೆ ತಿಳುವಳಿಕೆ ಕೊಡುತ್ತಿದ್ದರು.

**ಚುಂಬಿಸುವ ಸ್ಥಾನಗಳು**

ಹೆಚ್ಚು ಜನರು ನೆರೆದಿರುವ ಕಡೆ, ಹೆಚ್ಚು ಬೆಳಕಿಲ್ಲದ ಕೋಣೆಯಲ್ಲಿ, ಬಹಳ ಚಳಿಯಲ್ಲಿ, ಜ್ವರವಿರುವಾಗ ಚುಂಬಿಸಬಾರದೆಂದು 1927ರಲ್ಲಿ ಅಮೆರಿಕದವರು ಚಳವಳಿ ಹೂಡಿದ್ದರು. ಅವರು ಈ ಪದ್ಧತಿಯನ್ನು ಬೇರು ಸಹಿತವಾಗಿ, ನಿರ್ಮೂಲ ಮಾಡಲು ಯತ್ನಿಸಿದ್ದರು. ಸಾಧ್ಯವಾಗಲಿಲ್ಲ.

ತುಟಿಗೆ ಕೆಂಪು ಹಚ್ಚಿಕೊಂಡಿರುವ ಸ್ತ್ರೀಯರನ್ನು ಚುಂಬಿಸುವುದೂ, ಹಾವಿಗೆ ಮುತ್ತಿಕ್ಕುವುದೂ ಎರಡೂ ಒಂದೇ.

---




# ನವಜೀವಾತು
ಎಂಬ
## ಸೂತಿಕಾರಸಾಯನ
(ಇದು ರಿಜಸ್ಟರು ಮಾಡಲ್ಪಟ್ಟಿದೆ.)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ಆಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಅಮೋಘವಾದ ಮಧುರ ದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಲಔನ್ಸಿನ ೨ ಬಾಟ್ಲಿಗಳು ಹೆಚ್ಚುಕಡಿಮೆ ೪೮ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವುವು. ವಿಶೇಷ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ,**
**ನಂ. 15 ಕೊಡಿಯಾಲಬೈಲು, ದ. ಕ.**

## ಈಗ ನನ್ನನ್ನು ಮದುವೆಯಾಗುವಿರಾ?

(೧೦ನೆ ಪುಟದಿಂದ)

ತಂದುಕೊಂಡು ಅತ್ಯಾನಂದದಿಂದ ಉಪ್ಪರಿಗೆಯಿಂದ ದಡದಡನೆ ಇಳಿದು ಹೋದನು.

೦ ೦ ೦

ಲಲಿತೆಯು ರಾತ್ರಿ ಮೊದಲಿನ ಜಾಮವನ್ನು ಒಂದೆಡೆ ಕೂತು ಆಲೋಚಿಸುವುದರಲ್ಲೇ ಕಳೆದಳು. ಕಣ್ಣೀರಿಂದ ಅವಳ ವಕ್ಷಃಸ್ಥಳವೆಲ್ಲಾ ತೋಯ್ದುಹೋಯಿತು. ಆಮೇಲೆ ಎದ್ದು ತುಸುಹೊತ್ತು ಅತ್ತಿತ್ತ ಅಡ್ಡಾಡತೊಡಗಿದಳು ಉಪ್ಪರಿಗೆಯ ವಿಶಾಲವಾದ ಕೋಣೆಯಲ್ಲಿ. ಅನಂತರ ಕಡೆ ಗಟ್ಟಿಗೆ ಹೋಗಿ ವಿಶಾಲ ಆಕಾಶವನ್ನು ಕಣ್ಣುತುಂಬಾ ನೋಡುತ್ತಾ ನಿಂತಳು. ಕಾರಿರುಳಿನ ನೀರವ ಸಾಮ್ರಾಜ್ಯ ಸಾಗರದ ಮೇಲೆ ಹಿಮಗಡ್ಡೆಯಂತಹ ಬೆಳ್ಮೋಡಗಳು ತೇಲಿಹೋಗುತ್ತಿದ್ದುವು ತೇಲಿಹೋದಷ್ಟು ಮತ್ತೆ ಬರುತ್ತಿದ್ದುವು. ಎಲ್ಲಿಂದಲೋ ತೇಲಿಬಂದು ಎಲ್ಲಿಗೋ ಹಾರಿಹೋಗುತ್ತಿದ್ದವು. ಅವನ್ನು ನೋಡುತ್ತಿದ್ದಂತೆ ಲಲಿತೆಯ ಕಂಗಳು ಪುನಃ ಅಶ್ರುಭರಿತವಾದುವು. ಅವಳು ದೀರ್ಘಶ್ವಾಸಬಿಟ್ಟು ಏನೋ ನಿರ್ಧಾರಮಾಡಿ ಥಕ್ಕನೆ ಒಳಗೆ ಬಂದಳು. ದೀಪವು ನಿಸ್ತೇಜವಾಗಿ ಉರಿಯುತ್ತಿತ್ತು. ಸ್ಮಶಾನ ಮೌನವು ಕೋಣೆಯನ್ನು ಆವರಿಸಿದ್ದಿತು. ಲಲಿತೆಯು ಕೋಣೆಯ ಒಂದು ಬದಿಯಲ್ಲಿರುವ ಕವಾಟಿನ ಬಳಿಗೆ ಹೋಗಿ ಬಾಗಿಲು ತೆರೆದಳು. ಒಂದು ಸೀಸುಳಿಯನ್ನು ಹಿಡಿದುಕೊಂಡು ಮಲಗುವ ಮಂಚದ ಮೇಲೆ ಹೋಗಿ ಕೂತಳು. ಒಡನೆಯೇ ಸೀಸುಳಿಯ ಬೂಚಿ ತೆಗೆದು ಅದರಲ್ಲಿದ್ದ ದ್ರಾವಕವನ್ನು, ನಾಲ್ಕು ಮಡಿ ಮಡಚಿದ್ದ ವಸ್ತ್ರವೊಂದಕ್ಕೆ ಒಮ್ಮೆಯೇ ಹೊಯ್ದು ಅದರಿಂದ ತಕ್ಷಣ ಮುಖ ಮುಚ್ಚಿಕೊಂಡಳು. ಅನಂತರ ಮುಖ ಅಡಿಮಾಡಿ ಹಾಸಿಗೆಯ ಮೇಲೆ ಬಿದ್ದುಬಿಟ್ಟಳು. ಆಮೇಲೆ ಅಸಹನೀಯ ವೇದನೆಯಿಂದ ಹಾಸಿಗೆಯಲ್ಲೆಲ್ಲಾ ಹೊರಳಾಡಿದಳು. ಕಟಕಟ ಹಲ್ಲು ಕಡಿಯುತ್ತಾ ಮತ್ತೂ ಮತ್ತೂ ದ್ರಾವಕ ಮಿಶ್ರಿತ ವಸ್ತ್ರವನ್ನು ಮುಖಕ್ಕೊತ್ತಿಟ್ಟುಕೊಂಡಳು. ಹಾಸಿಗೆಯ ಮೇಲೆ ಅತ್ತಿತ್ತ ಹೊರಳಾಡುತ್ತಾ ಇಡೀ ರಾತ್ರಿ ಕಳೆದಳು. ಎಷ್ಟೊಂದು ವೇದನೆಯಾದರೂ ಪಿಟ್ಟೆಂದು ಸ್ವರ ಹೊರಡಲಿಲ್ಲ ಅವಳ ಬಾಯಿಯಿಂದ. ಬೆಳಗ್ಗೆ ಬೇಗ ಎದ್ದು ಮೊದಲಾಗಿ ಕನ್ನಡಿಯಲ್ಲಿ ಮುಖನೋಡಿದಳು. ಮುಖವೆಲ್ಲಾ ಸುಟ್ಟು ಕರ್ರಗಾಗಿಹೋಗಿತ್ತು, ಗಲ್ಲ, ತುಟಿ ಮೊದಲಾದುವು ಬಾತುಹೋಗಿದ್ದವು. ಕನ್ನಡಿ ನೋಡಿ, ಬಹಳ ಸಮಾಧಾನಗೊಂಡವಳಂತೆ ವಿಕಟವಾಗಿ ನಕ್ಕಳು. ಪುನಃ ಹೋಗಿ ಹಾಸಿಗೆಯ ಮೇಲೆ ಬಿದ್ದಳು.

೦ ೦ ೦

ರತ್ನಾಕರನಿಗೂ ರಾತ್ರಿ ನಿದ್ದೆ ಬರಲಿಲ್ಲ. ಯಾವಾಗ ಬೆಳಗಾಗುವುದೆಂದು ನಿರೀಕ್ಷಿಸುತ್ತಾ ಹಾಸಿಗೆಯಲ್ಲಿ ಹೊರಳಾಡಿ ಕಾಲಕಳೆದನು. ಮುಂಬೆಳಕು ಹರಿಯುವುದರಲ್ಲಿಯೇ ಎದ್ದು ತನ್ನ ಗೆಳೆಯರನ್ನು ಕರೆಸಿ ಟೀಕ್ಸಿ ಮಾಡಿಕೊಂಡು ಅತ್ಯುಲ್ಲಾಸದಿಂದ ಲಲಿತೆಯ ಮನೆಗೆ ಹೋದನು. ಹೋರ್ನಿನ ಶಬ್ದ ಕೇಳಿದಾಗಲೂ ಮನೆಯೊಳಗೆ ಒಂದಿಷ್ಟೂ ಸದ್ದಾಗದುದನ್ನು ಕಂಡು ಸ್ವಲ್ಪ ಸಂದೇಹಗೊಂಡನು. ಗೆಳೆಯರ ಗಡಣದಿಂದ ಒಳ ಪ್ರವೇಶಿಸಿದಾಗ ಅಡಿಗೆಯ ಅಜ್ಜಿಯ ಹೊರತು ಬೇರೆ ಯಾರೂ ಇರಲಿಲ್ಲ. ನೆಟ್ಟಗೆ ಉಪ್ಪರಿಗೆಯ ಕಡೆಗೆ ಧಾವಿಸಿ ಮೇಲೆ ಹತ್ತಿದನು. ಉಪ್ಪರಿಗೆ ಬಾಗಿಲು ಹಾಕಿತ್ತು. ರತ್ನಾಕರನ ಎದೆಯೊಮ್ಮೆ ಧಸ್ಸೆಂದಿತು. ಲಲಿತೆಯು ಅತ್ಯಾನಂದ

50 ವರ್ಷಗಳಿಂದ ಜಗತ್ಪ್ರಸಿದ್ಧ ಶಕ್ತಿವರ್ಧಕ:—

**ಮದನಮಂಜರಿ**

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನ ಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯವನ್ನು ಧಾರಾಳವಾಗಿ ವೃದ್ಧಿಗೊಳಿಸಿ, ದೇಹಕ್ಕೆ ನೂತನ ಶಕ್ತಿ, ಸ್ಫೂರ್ತಿ ಆನಂದ, ಉತ್ಸಾಹಗಳನ್ನು ಉಂಟುಮಾಡುವುವು

ಡಬ್ಬಿ 1ರ ಕ್ರಯ: ರೂ. 1.

**ರಮಣವಿಲಾಸಿನಿ ವಟಿಕ**

ಕಾಮಶಕ್ತಿ ಹೆಚ್ಚಿ ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ನಿಶ್ಚಿತ ಮತ್ತು ನಿರಪಾಯಕರ ಔಷಧಿ.

ಡಬ್ಬಿ 1ರ ಕ್ರಯ: ರೂ. 1.

ಮದನಮಂಜರಿ ಫಾರ್ಮಸಿ, 184 ಚೈನಾ ಬಜಾರ್, ಮದ್ರಾಸು.

ಬೆಂಗಳೂರು:-ಆರ್ಯನ್ ಮೆಡಿಕಲ್ ಸ್ಟೋರ್ಸ್, 72 ಚಿಕ್ಕಪೇಟೆ.

ಮೈಸೂರು ಏಜೆಂಟರು: ಟಿ. ಸಿ. ನಟರಾಜಾ & ಕೊ.

ದಿಂದ ಓಡಿಬಂದು ಮನೆಬಾಗಿಲಲ್ಲೇ ತನ್ನನ್ನು ಸ್ವಾಗತೀಕರಿಸುವಳೆಂದವನು ನೆನಸಿದ್ದ. ಆದುದರಿಂದಲೇ ಟೇಕ್ಸಿ ಡ್ರೈವರನೊಡನೆ ಗಟ್ಟಿ ಹೋರ್ನ್ ಮಾಡಹೇಳಿದ್ದ. ತಾನು ಬಂದುದೇ ಬಹಳ ಬೇಗವಾಯಿತೆಂದು ನೆನಸಿ ಒಳಗೆ ಪ್ರವೇಶಿಸಿದನು. ಅಲ್ಲಿಯೂ ಲಲಿತೆಯು ಇರದುದನ್ನು ಕಂಡು, ಉಪ್ಪರಿಗೆಯಲ್ಲಿ ಶೃಂಗಾರಮಾಡುತ್ತಿರಬೇಕೆಂದು ಉಲ್ಲಾಸದಿಂದ ಒಬ್ಬನೇ ಉಪ್ಪರಿಗೆ ಹತ್ತಿದನು. ಉಪ್ಪರಿಗೆ ಬಾಗಿಲು ಹಾಕಲ್ಪಟ್ಟುದನ್ನು ಕಂಡು ಅವನಲ್ಲಿ ತಳಮಳವುಂಟಾಯಿತು. "ಲಲಿತ! ಲಲತ!!" ಎಂದು ಗಟ್ಟಿಯಾಗಿ ಕರೆದನು. ಒಡನೆಯೇ ಬಡಬಡ ಬಾಗಿಲು ಬಡಿದನು. ಸ್ವಲ್ಪ ಸಮಯದಲ್ಲಿಯೇ ಒಳಗಿಂದ ಗಟ್ಟಿಯಾಗಿ ಮತ್ತು ವಿಕಟವಾಗಿ ನಗುವ ಶಬ್ದ ಕೇಳಿಸಿತು. ಕೂಡಲೆ ಬಾಗಿಲು ತೆರೆಯಲ್ಪಟ್ಟಿತು. ರತ್ನಾಕರನು ನೋಡುವುದಾದರೂ ಏನನ್ನು! ಅವನು ಒಂದೊಮ್ಮೆ ಚಕಿತನಾಗಿ ಗೊಂಬೆಯಂತೆ ನಿಂತುಬಿಟ್ಟನು. ಲಲಿತೆಯು ಪುನಃ ವಿಕಟವಾಗಿ ನಕ್ಕಳು. "ಈಗ ನನ್ನನ್ನು ಮದುವೆಯಾಗುವಿರಾ?" ಎಂದು ಪ್ರಶ್ನಿಸಿ ಮತ್ತೊಮ್ಮೆ ನಕ್ಕಳು. ರತ್ನಾಕರನು ಉಸಿರೆತ್ತದೆ ದಡದಡನೆ ಉಪ್ಪರಿಗೆಯಿಂದ ಕೆಳಗಿಳಿದನು. "ಬನ್ನಿ! ಬನ್ನಿ! ಬೇಗ ಹೋಗುವ ಇಲ್ಲಿಂದೊಮ್ಮೆ!" ಎಂದು ಗೆಳೆಯರನ್ನೆಲ್ಲಾ ಕೈಹಿಡಿದು ಎಳೆದೊಯ್ದು ಹೊರಗೋಡಿ ಟೇಕ್ಸಿ ಹತ್ತಿದನು. ಅವನ ಲಲಿತೆಯು ರಾತ್ರಿ ಸುಟ್ಟು ಮಸಿಯಾಗಿದ್ದಳು. ಅವನ ಮುಂದೆ ಬಂದು ನಿಂತ ಲಲಿತೆಯೇ ಬೇರೆ.

---

## ತುಸು ವಿನೋದ

ಮೇಸ್ಟ್ರು:- ಎಲೋ, ಮೋಹನ್! ತಾಯಿಗೆ ಕಾಗದ ಬರೆಯೆಂದರೆ ತಂದೆಗೆ ಬರೆದಿರುವೆ ಯಾಕೋ?

ವಿದ್ಯಾರ್ಥಿ:- ನನ್ನ ತಾಯಿಗೆ ಇಂಗ್ಲಿಷ್ ಬರುವುದಿಲ್ಲ ಸಾರ್.

೦ ೦ ೦

ಶಂಕ್ಟು:- ಹೌದೋ ವೆಂಕ್ಟು, ನೀನು ಘಟಿಂಗ ಎಂಬ ಶಬ್ಧವನ್ನು ಬಹಳವಾಗಿ ಉಪಯೋಗಿಸುತ್ತಿರುವೆಯೆಂಬುದು ಕೇಳಿದೆ ನಾನು; ನಿಜವೇ?

ವೆಂಕ್ಟು:- ಯಾವ ಘಟಿಂಗ ಹೇಳಿದ್ದು ನಿನಗೆ.

---


ಜಾಗ್ರತೆ! ಜಾಗ್ರತೆ!

ದೇಶವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಪ್ರಶಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವುದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರಸನ್ನು ನೋಡಿ ತೆಗೆದುಕೊಳ್ಳಿರಿ.

**ನಕಲಿ ಮಾಲಿಗೆ ಮೋಸಹೋಗಬೇಡಿರಿ!**

# ದ್ರಾಕ್ಷಾಮೃತ

**ಪಂಡಿತ್ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ, ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ**

ಒಂದೇ ಸವನೆ ೩೦ ವರ್ಷದ ಅನುಭವದಿಂದ, ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ,

**ಶಕ್ತಿಯ ಮೇಲೆ ಮೊದಲನೇ ತರದ ಟಾನಿಕ್**

ಇದರ ಸೇವನೆಯಿಂದ ರಕ್ತಶುದ್ಧಿಯಾಗುವದು. ಶೌಚ ಸಾಫವಾಗಿ ಪಚನಕ್ರಿಯೆ ಬೆಳೆಯುವುದು, ಕಣ್ಣು ಕೈ ಕಾಲು ಉರಿಯೋಣಿ ಮೊದಲಾದ ಉಷ್ಣ ಮತ್ತ ಪಿತ್ತವಿಕಾರಗಳು ನಾಶವಾಗುವವು. ಸ್ತ್ರೀಯರಿಗೆ ಮುಟ್ಟುದೋಷದಿಂದಾದ ಸರ್ವ ರೋಗ ನಿವಾರಣೆಯಾಗಿ ಸಂತತಿ ಧಾರಕವಾಗುವುದು. ಅಂತೂ ಇದು ಬಾಲ-ವೃದ್ಧ-ಸ್ತ್ರೀ ಪುರುಷರಿಗೆ ಅತಿ ಉಪಯುಕ್ತವಾಗಿದೆ.

**ಕ್ರಯ ೧ ಬಾಟ್ಲಿ ರೂ: ೧-೪-೦**

**ಮಾನೇಜರ್:— ದ್ರಾಕ್ಷಾಮೃತ ಡಿಪೋ, ಪೋಸ್ಟ್—ನಿಪ್ಪಾಣಿ, ಜಿಲ್ಲಾ ಬೆಳಗಾಂವ.**

ಮಂಗಳೂರು ಸ್ಟೋಕಿಸ್ಟರು:— ಕೆನರಾ ಮೆಡಿಕಲ್ ಸಪ್ಲೈಸ್ ಲಿಮಿಟೆಡ್

ಉಡುಪಿ ಸ್ಟೋಕಿಸ್ಟರು:- ಪೈ ಫಾರ್ಮಸಿ, ಉಡುಪಿ. ಬೆಂಗಳೂರು:—ಸೀತಾರಾಮ ಪೈ ಬ್ರದರ್.

ಮೈಸೂರು:- ಟಿ. ಸಿ. ನಟರಾಜ, ಮತ್ತು ಮೋಡರ್ನ್ ಫಾರ್ಮಸಿ.

# “ಗೆಳೆಯರ ತಂಡ”

ಸ್ಥಾಪನೆ: ೧೯೩೪

ವಾರ ೯೯

ಸದಸ್ಯರು ೨೭೧

ಅಖಿಲ ಕರ್ನಾಟಕದಲ್ಲಿ ಹಬ್ಬಿರುವ ಏಕಮಾತ್ರ ಮಿತ್ರಮಂಡಲಿ.


**ಕನ್ನಡ ಗೆಳೆಯರೇ,**

ನಾಸೀ ಸಲ, ಬ್ರಿಟಿಷ್ ವೈಮಾನಿಕ ತರುಣನೊಬ್ಬನು, ಮಾತೃ ಭೂಮಿಯ ರಕ್ಷಣೆಗಾಗಿ ವಿಮಾನ ಯುದ್ಧಕ್ಕೆ ಹೊರಡುವ ಸುಮುಹೂರ್ತದಲ್ಲಿ ಪ್ರೀತಿಯ ಹೆತ್ತಮ್ಮನಿಗ ಬರೆದ ಕಾಗದವನ್ನು ನಿಮ್ಮೆಲ್ಲರ ಮುಂದಿಡುತ್ತೇನೆ. ಇಂದಿನ ಪರಿಸ್ಥಿತಿಯಲ್ಲಿ ಬ್ರಿಟಿಷ್ ತರುಣ ವರ್ಗದ ಹೃದಯ ಹೇಗಿರುವುದೆಂಬುದರ ದಿಗ್ದರ್ಶನಮಾಡಿಕೊಡುವುದಗತ್ಯ ಆದನ್ನೋದಿ ಕನ್ನಡ ಗೆಳೆಯರೆಲ್ಲರೂ ತಮ್ಮ ಹೃದಯಗಳನ್ನು ಪರೀಕ್ಷಿಸಿಕೊಂಡು ಹುರುಪುಗೊಳ್ಳಲಿ. ಕನ್ನಡ ತಾಯಿ ಮತ್ತು ಭಾರತಾಂಬೆಗಾಗಿ ಅಷ್ಟೇ ಆನಂದದಿಂದ, ಅಭಿಮಾನದಿಂದ, ಉತ್ಸಾಹದಿಂದ ಪ್ರಾಣ ಬಲಿದಾನವೀಯುವುದಕ್ಕೂ ಸಿದ್ಧರಾಗಲಿ!

**ಪನ್ನತಿ ಪ್ರೀತಿಯಮ್ಮ,**


ಮುಂದಾಗಿ ನನಗೇನೂ ಸೂಚಿತವಾಗಿಲ್ಲ ಆದರೆ ವಿದ್ಯಮಾನಗಳು ತೀವ್ರವಾಗಿ ಚಲಿಸುತ್ತಿವೆ. ಜೇಗನೆ ನಾವು ವೈರಿಗಳ ಮೇಲೇರಿ ಹೋಗಿ ಧಾಳಿ ನಡಿಸಬೇಕಾಗಿದೆ. ಅಂತಹ ಧಾಳಿಯಲ್ಲಿ ನಾನು ಹಿಂತಿರುಗಿ ಬಾರದಿದ್ದಲ್ಲಿ ಈ ಪತ್ರವನ್ನು ನಿನಗೆ ಕಳುಹಿಸಬೇಕೆಂದು ನಾನು ತಿಳಿಸಿರುವೆನು ಒಂದು ತಿಂಗಳ ತನಕ ನೀನು ಆಶೆಯಿಂದ ನಿರೀಕ್ಷಿಸುತ್ತಿರು. ಅಷ್ಟರೊಳಗೆ ನಾನು ಬಾರದಿದ್ದರೆ, ಸಂದುಹೋಗಿರುವ ಹಲವು ಮಂದಿ ವೀರ ವೈಮಾನಿಕರಂತೆ ನಾನೂ ನನ್ನ ಕರ್ತವ್ಯ ಮಾಡಿ, ಮುಂದಿನ ಆದರ ನಿರ್ವಹಣದ ಜವಾಬ್ದಾರಿಯನ್ನು ಬಲು ದಕ್ಷರಾದ ನನ್ನ ಬಂಧುಗಳಿಗೊಪ್ಪಿಸಿ ನಿರ್ಯಾಣಹೊಂದಿದೆನೆಂದು ತಿಳಿ.

ಈ ಯುದ್ಧದಲ್ಲಿ ನನ್ನ ಜವಾಬ್ದಾರಿಯು ಅತ್ಯಂತ ಪ್ರಾಮುಖ್ಯವಾದುದೆಂಬುದನ್ನು ತಿಳಿಯಲು ನೀನು ಸಂತೋಷಪಡದಿರಲಾರೆ. ಉತ್ತರ ಸಮುದ್ರದ ನಮ್ಮ ಪಹರೆಯಿಂದಾಗಿ ನಮ್ಮ ಹಡಗಗಳ ಮಾರ್ಗ ಸುರಕ್ಷಿತವಾಗಿದೆ. ಒಂದು ಸಂದರ್ಭದಲ್ಲಿ ನಾವು ಕೊಟ್ಟ ವರ್ತಮಾನದಿಂದ ಹಾವಳಿಗೊಳಗಾದ ದೀಪಸ್ತಂಭವೊಂದರ ಜನರ ಸಹಾಯಕ್ಕಾಗಿ ಹೋದ ಹಡಗದಲ್ಲಿದ್ದ ಹಲವರ ಪ್ರಾಣವುಳಿನಂತಾಯಿತು. ಅಮ್ಮಾ, ಇದರಿಂದ ನೀನು ಬಹಳ ಸಮಾಧಾನಪಟ್ಟು ಹೆಮ್ಮೆಪಡಲಾರೆಯಾ? ನನ್ನಿಂದ ಸಾಧ್ಯವಾದಷ್ಟು ಚಾತುರ್ಯದಿಂದ ನಾನು ನನ್ನ ಕರ್ತವ್ಯಮಾಡುವೆ. ಅದಕ್ಕಿಂತ ಹೆಚ್ಚು ಯಾವ ಮನುಷ್ಯನಿಗೂ ಮಾಡಲು ಸಾಧ್ಯವಿಲ್ಲ. ಮನುಷ್ಯನೆನಿಸುವನು ಅದಕ್ಕಿಂತ ಕಡಿಮೆಮಾಡಲಾರ.

ನನಗಾಗಿ ನೀನು ಮಾಡಿರುವ ತ್ಯಾಗವನ್ನು ಮರೆಯಲಾರೆನಮ್ಮಾ. ನೀನೆಷ್ಟೇ ಕಷ್ಟಪಟ್ಟು ನನಗೆ ವಿದ್ಯೆಯಿತ್ತಿರುವೆ. ಮುಂದೆ ಒಳ್ಳೇದಾಗುವುದೆಂಬ ಭರವಸೆಯಿಂದ ಸದಾ ಸಂತೋಷಚಿತ್ತಳಾಗಿದ್ದೆ. ನಿನ್ನ ಈ ತ್ಯಾಗ ಮತ್ತು ಕಷ್ಟಸಹನೆ ವ್ಯರ್ಥವಾಯಿತೆಂದೆಣಿಸಬೇಡಮ್ಮ ನನ್ನ ಮರಣದಿಂದ. ಎಂದೂ ಹಾಗಾಗಲಾರದಮ್ಮ. ನಿನ್ನ ತ್ಯಾಗವು ನನ್ನದರಷ್ಟೇ ಮಹತ್ವವಾದುದೆಂಬುದನ್ನು ನನ್ನ ಮರಣವು ಸಿದ್ಧಗೊಳಿಸುವುದು. ಇಂಗ್ಲೆಂಡಿನ ಸೇವೆ ಮಾಡುವವರು ಅದರಿಂದೇನೂ ನಿರೀಕ್ಷಿಸಬಾರದು. ನಮ್ಮ ದೇಶವು ಕೇವಲ ಉಂಡುತಿಂದು ಅಂಡಲೆದು ಮಲಗುವ ಸ್ಥಳವೆಂದು ನಾವು ಪರಿಗಣಿಸಿದರೆ ನಮ್ಮನ್ನೇ ನಾವು ಹೀನಪಡಿಸಿಕೊಂಡಂತೆ.

ಇಂದು ನಮ್ಮ ದೇಶವೂ ಸಾಮ್ರಾಜ್ಯವೂ ಕ್ರೈಸ್ತ ಧರ್ಮವೂ, ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯೂ ಇಂದು ಲೋಕವು ಕಂಡಿರುವ ಅತಿ


**S. S. Rubber Stamp mfg. Co., Chikmagalur**



ತಮಗೆ ಅಗತ್ಯ ಬೇಕಾಗುತ್ತಿರುವ ಉತ್ತಮ ತರತರದ ರಬ್ಬರ್ ಮೊಹರುಗಳು, ಅರಗಿನ ಶೀಲುಗಳು, ಬ್ಲಾಕುಗಳೇ ಮುಂತಾದ ಸಾಮಾನುಗಳು ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಶ್ರೀ ಸುಬ್ರಹ್ಮಣ್ಯ ರಬ್ಬರ್ ಸ್ಟ್ಯಾಂಪ್ ಕಂಪೆನಿ, ಚಿಕ್ಕಮಗಳೂರು.**

ದೊಡ್ಡ ಮತ್ತು ಅಭೂತಪೂರ್ವ ಗಂಡಾಂತರಕ್ಕೊಳಗಾಗಿದೆ. ಈ ಗಂಡಾಂತರವನ್ನು ನಿರೋಧಿಸಲು ನನ್ನಿಂದ ಸಾಧ್ಯವಾದಷ್ಟು ಕೆಲಸವಮಾಡುವ ವಯಸ್ಸನ್ನೂ ಸಂದರ್ಭವನ್ನೂ ಪಡೆದಿರುವ ನಾನು ಸುದೈವಿಯು; ಧನ್ಯನು. ಇದಕ್ಕಾಗಿ ನಿನಗೆ ನನ್ನ ಅನಂತ ಪ್ರಣಾಮ.

ಈ ಯುದ್ಧದ ವಿರೋಧವಾಗಿ ಏನೆಲ್ಲಾ ಹೇಳಲ್ಪಟ್ಟರೂ ನಾನದನ್ನು ಬಹಳ ಉತ್ತಮವಾದುದೆಂದೇ ಪರಿಗಣಿಸುವೆನು. ಹಿಂದೆ ಆತ್ಮಬಲಿದಾನವಿತ್ತಿರುವವರಂತೆ ಇಂದು ಕೂಡಾ ದೇಶಕ್ಕಾಗಿ ಮತ್ತು ನಾಗರಿಕತೆಗಾಗಿ ಸಾಹಸದಿಂದ ಹೋರಾಡಿ, ಪ್ರಾಣವೀಯುವ ಸುಸಂದರ್ಭವು ನಮಗೆಲ್ಲರಿಗೂ ದೊರಿತಿದೆ. ನಾನು ಎಷ್ಟು ದೀರ್ಘಕಾಲ ಜೀವಿಸುವಂತಾದರೂ ಒಂದು ವಿಷಯ ಮಾತ್ರ ಎಂದಿಗೂ ಬದಲಾಗದು. ನಾನು ಆಂಗ್ಲೇಯನಾಗಿ ಬಾಳಿ ಆಂಗ್ಲೇಯನಾಗಿಯೇ ಸಾಯುವೆನು. ಇದರಿದುರಲ್ಲಿ ಬೇರೆ ಯಾವ ಸಂಗತಿಯೂ ಎಳ್ಳಿನ ಏಳು ಭಾಗದಷ್ಟು ಪ್ರಾಮುಖ್ಯವಲ್ಲ.

ನೀನು ನನಗಾಗಿ ವ್ಯಥೆಪಡಬಾರದಮ್ಮಾ. ನಿನಗೆ ಧರ್ಮದಲ್ಲಿ ನಿಜವಾದ ವಿಶ್ವಾಸವಿರುವುದಾದರೆ ಅದು ಕಪಟತನವೆಂದಾಗುವುದು. ನನಗೆ ಮರಣದ ಭೀತಿಯೇ ಇಲ್ಲ. ಒಂದು ತರದ ಉತ್ತೇಜಿಂತೆಯಿದೆ. ವಿಶ್ವವು ವಿಶಾಲವಾದುದು, ಅನಂತವಾದುದ; ಕಾಲಾತೀತವಾದುದು. ಮಾನವ ಜೀವನವು ಅವನ ತ್ಯಾಗದ ಪ್ರಮಾಣದಿಂದ ಮಾತ್ರ ಸಾರ್ಥಕವಾಗುವುದು. ಶೀಲ ಮತ್ತು ವ್ಯಕ್ತಿತ್ವ ಪಡೆಯಲು ನಾವು ಈ ಲೋಕಕ್ಕೆ ಕಳುಹಿಸಲ್ಪಡುವುದು ಅವನ್ನಾರೂ ನಮ್ಮಿಂದೊಯ್ಯಲಾರರು. ಕೇವಲ ಉಂಡು ತಿಂದು ನಿದ್ರಿಸಿ, ಶ್ರೀಮಂತರಾಗಿ ಬೆಳೆದು ಮಕ್ಕಳನ್ನು ಹುಟ್ಟಿಸುವುದರಲ್ಲಿ ಮಾತ್ರ ತೃಪ್ತರಾಗಿರುವವರು, ಇಡೀ ಜೀವಮಾನದಲ್ಲಿ ಅವರು ಸುಖಶಾಂತಿಯಿಂದಿದ್ದರು ಕೂಡಾ ಅವರು ಪಶುಗಳಿಗಿಂತ ಉತ್ತಮರಲ್ಲ.

ನನ್ನ ಜೀವನದ ಕೊನೆಯ ಸತ್ವ ಪರೀಕ್ಷೆಯು ಬೇಗನೆ ಬರಲಿದೆ. ಅದಕ್ಕೆ ನಾನು ಸಂಪೂರ್ಣ ಸಿದ್ಧನಿದ್ದೇನೆ. ಇಷ್ಟೊಂದು ಎಳೆ ವಯಸ್ಸಿನಲ್ಲಿ ದೇಶಸೇವೆಗಾಗಿ ಜೀವನವನ್ನು ಬಲಿಕೊಟ್ಟು ಸಾರ್ಥಕಪಡಿಸುವ ಸಂದರ್ಭ ದೊರೆತ ನಾನು ಸುದೈವಿ. ನನ್ನ ಇಹಲೋಕದ ಕರ್ತವ್ಯವು ಬೇಗನೆ ನೆರವೇರುವುದು. ನಾನು ಸಂತೋಷದಿಂದ ಸಾಯಲು ಸಿದ್ಧನಿದ್ದೇನೆ. ಆದರೆ ನಿನ್ನ ಅಪರ ವಯಸ್ಸಿನಲ್ಲಿ ನಿನ್ನೊಂದಿಗಿದ್ದು ನಿನ್ನನ್ನು ಸಂತೋಷಗೊಳಿಸುವ ಸಂದರ್ಭ ನನಗೆ ದೊರೆಯಲಿಲ್ಲವಲ್ಲಾ ಎಂಬುದೊಂದು ಚಿಂತೆ ಮಾತ್ರ ನನ್ನನ್ನು ಕೊರೆಯುತ್ತಿದೆ. ಆದರೆ ನೀನು ಶಾಂತಿ ಮತ್ತು ಸ್ವಾತಂತ್ರ್ಯದಿಂದ ಬಾಳುವೆ. ಅದಕ್ಕೆ ನಾನೇ ಪ್ರತ್ಯಕ್ಷವಾಗಿ ನನ್ನ ಪಾಲಿನ ಸಹಾಯವಿತ್ತಂತಾಗುವುದು. ಆದುದರಿಂದ ಈ ದೃಷ್ಟಿಯಿಂದಲೂ ನನ್ನ ಜೀವನವು ನಿರರ್ಥಕವಾಗಿರುವುದಿಲ್ಲ.

ಇತಿ

ನಿನ್ನ ಪ್ರೀತಿಯ ಪುತ್ರ.

(ಬ್ರಿಟಿಷ್ ರೋಯಲ್ ಏರ ಫೋರ್ಸಿನ ಬೋಂಬರ್ ವಿಮಾನ ದಳದ ಈ ತರುಣ ವೈಮಾನಿಕನು ವೈರಿಗಳ ಮೇಲಿನ ಧಾಳಿಯಲ್ಲಿ ಕೊಲ್ಲಲ್ಪಟ್ಟನು. ಆತನ ದಳದ ನಾಯಕನು ಈ ಪತ್ರವನ್ನು ತಾಯಿಗೆ ಕಳುಹಿಸಿದನು. ತಾಯಿಯ ಒಪ್ಪಿಗೆಯಿಂದ ಅದು ಬ್ರಿಟಿಷ್ 'ಟೈಮ್ಸ್' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.)

---


## ಅಂತರಂಗದ ಏಜಂಟರಿಗೆ

'ಅಂತರಂಗ'ದ ಮೊದಲಿನ ಲೆಕ್ಕಾಚಾರದ ಯಾವ ಹೊಣೆಯೂ ನಮಗಿಲ್ಲ. ಆದರೆ ಜವಾಬ್ದಾರಿಯಿಂದ ವಿರಹಿತವಾಗಿಯೇ ನಾವು 'ಅಂತರಂಗ' ನಡೆಸುವ ಜವಾಬ್ದಾರಿ ವಹಿಸಿರುವುದು. ಆದ್ದರಿಂದ ತಮಗೆ ಬೇಕಾದ ಪ್ರತಿಗಳ ಒಂದು ತಿಂಗಳ ಹಣವನ್ನು ಮುಂಗಡವಾಗಿ ಕಳಿಸಬೇಕು. ಮುಂಗಡ ಹಣ ಬಾರದೆ ಪತ್ರಿಕೆ ಖಂಡಿತಾ ಕಳಿಸಲಾಗುವುದಿಲ್ಲ.

## ಚಂದಾದಾರರಿಗೆ—

ಈ ಕಾಲಕ್ಕೆ ಚಂದಾ ಅವಧಿ ಮುಗಿದ ಚಂದಾದಾರರು ತಮ್ಮ ಹೊಸ ವರ್ಷದ ಚಂದಾ ಹಣವನ್ನು ದಯಮಾಡಿ ಮುಂದಾಗಿ ಕಳಿಸಬೇಕಾಗಿ ಅಪೇಕ್ಷಿಸುತ್ತೇವೆ. ಹೊಸದಾಗಿ ಚಂದಾದಾರರಾಗುವವರು ವಾರ್ಷಿಕ ಚಂದಾ ರೂ. 3/-ನ್ನು ಮುಂಗಡವೇ ಕಳಿಸಬೇಕಾಗಿದೆ.

ಮೆನೇಜರ್: ಅಂತರಂಗ,
ನವಯುಗ ಆಫೀಸು, ಉಡುಪಿ.


# ರೇಡಿಯೆಂಟ್ ಕಾಂಪಿಟಿಷನ್ ನಂ. ೫೧

## [ದಸರಾ ಸ್ಪೆಷಲ್]

## ಒಟ್ಟು ಬಹುಮಾನಗಳು ೫೦೦ ರೂ,

## ಪ್ರಥಮ ಬಹುಮಾನ ರೂ. ೩೨೫ ಇತರ ಬಹುಮಾನಗಳು ರೂ. ೧೭೫

**ನಿಬಂಧನೆಗಳು**— ೧. ಪ್ರತಿಯೊಂದು ಕೂಪನ್ನಿಗೂ ಎಂಟು ಆಣೆಗಳು ಆದರೆ ಒಬ್ಬನೇ ಒಟ್ಟಿಗೆ ಎರಡು ಕೂಪನ್ನುಗಳನ್ನು ಕಳುಹಿಸುವವರು ಮತ್ತೆ ಎರಡು ಉಚಿತ ಕೂಪನ್ನುಗಳನ್ನು ಕಳುಹಿಸಬಹುದು, ಆದರೆ ನಾಲ್ಕು ಕೂಪನ್ನುಗಳ ಒಂದು ಸೆಟ್ಟಿಗೆ ೧ ರೂ. ಮಾತ್ರ. ಹೀಗೆ ಎರಡು ರೂಗಳ ಎಷ್ಟು ಸೆಟ್ಟುಗಳನ್ನಾದರೂ ಕಳುಹಿಸಬಹುದು, ಬಿಳೀ ಕಾಗದದ ಮೇಲೆ ಈ ಕೂಪನನ್ನು ಕಾಪಿಮಾಡಿ ಕಳುಹಿಸಬಹುದು. ೨. ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ನಂಬರುಗಳನ್ನು ಕೂಪನ್ನಿನ ಮೇಲೆ ಬರೆಯಬೇಕು. ೩. ಸ್ಪಷ್ಟವಾಗಿ ಚಿತ್ತಿಲ್ಲದೆ ಶಾಯಿಯಲ್ಲಿ ಕೂಪನ್ನುಗಳನ್ನು ಭರ್ತಿಮಾಡಬೇಕು. ಉತ್ತರಗಳನ್ನು ಬಿಳೀ ಕಾಗದದ ಮೇಲೆ ಈ ಕೂಪನನ್ನು ಕಾಪಿಮಾಡಿ ಕಳುಹಿಸಬಹುದು. ಕವರಿಗೆ ನಿರ್ದಿಷ್ಟವಾದ ಅಂಚೆ ಚೀಟಿಯನ್ನು ಹಚ್ಚದೆ ಬಂದರೆ ... ದವುದಿಲ್ಲ. ನಿಮ್ಮ ಎಂಟ್ರಿ ಕವರಿನ ಹಿಂಭಾಗದಲ್ಲಿ ಹೆಸರು ವಿಳಾಸ ಒಟ್ಟು ಕೂಪನ್ ನಂ. ಮತ್ತು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ನಂಬರ್ ಇವುಗಳನ್ನೆಲ್ಲಾ ಬರೆದು ಕಳುಹಿಸಬೇಕು. ೪ ಈ ಸ್ಪರ್ಧೆಯ ಸರಿಯಾದ ಉತ್ತರವನ್ನು ನಿರ್ಧರಿಸಿ ಮೊಹರುಮಾಡಿಟ್ಟಿದೆ. ಈ ಉತ್ತರಕ್ಕೆ ಪ್ರತಿ ಅಕ್ಷರವೂ ಸರಿಹೋಲುವ ಎಂಟ್ರಿಗೆ ಮೊದಲನೆಯ ಬಹುಮಾನವನ್ನು ಕೊಡಲಾಗುವುದು. ತೊಡಕಿನಲ್ಲಿ ಒಂದಕ್ಷರವೂ ಎರಡು ಮತ್ತು ಅನೇಕ ಪದಗಳನ್ನು ಮಾಡಿದರೆ ಅಷ್ಟೂ ತಪ್ಪೆಂದೂ ಗಣಿಸಲ್ಪಡುವುದು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಹೆಚ್ಚಾಗಿದ್ದಲ್ಲಿ ಬಹುಮಾನವು ಮ್ಯಾನೇಜರ ತೀರ್ಪಿನಂತೆ ಹಂಚಲ್ಪಡುವುದು. ೫ ಸ್ಪರ್ಧೆಯ ವಿಷಯದಲ್ಲಿ ಮ್ಯಾನೇಜರ ತೀರ್ಪೇ ಕಡೆಯದು. ಮತ್ತೆ ಪತ್ರವ್ಯವಹಾರಕ್ಕೆ ಅವಕಾಶವೇ ಇಲ್ಲ. ೬. ಒಂದು ಸ್ಪರ್ಧೆಗೆ ಕಳುಹಿಸಿದ ಮೊಬಲಗನ್ನು ಯಾವ ಕಾರಣದಿಂದಲೂ ಬೇರೆ ಸ್ಪರ್ಧೆಗೆ ಬದಲಾಯಿಸಲಾಗದು ಅಥವಾ ವಾಪಸ್ಸು ಮಾಡಲಾಗದು. ೭. ಪೂರ್ತಿಯಾಗಿ ಮಾಡದೇ ಬಂದ ಉತ್ತರಗಳನ್ನು ನಿರಾಕರಿಸಲ್ಪಡುತ್ತೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಮೇಲಿನ ನಿಬಂಧನೆಗಳಿಗೆ ಒಳಪಟ್ಟವರು ಮಾತ್ರ ಉತ್ತರಗಳನ್ನು ಕಳುಹಿಸಬೇಕು,




ಹೆಸರು..............................

ವಿಳಾಸ..............................

...................................

ಕೂಪನ್............ ಪೋ. ನಂ.............

**ಕೂರುಹುಗಳು ಎಡದಿಂದ ಬಲಕ್ಕೆ**—೧. ಈಗ ತಾನೆ ನಮ್ಮ ಪ್ರಭುವರ್ಯರು ಪಟ್ಟಾಭಿಷಿಕ್ತರಾಗಿ ಪ್ರಜೆಗಳ ಇದಕ್ಕೆ ಕಾರಣರಾಗಿರುವರು. ೪. ಪ್ರಾಯಸ್ಥನಿಗೆ ಇದರ ಪರಿಣಾಮವು ಹೆಚ್ಚಿಗೆ ಉಂಟು. ೬. ಸಂಗೀತದ ಇದು ಸಾಧಾರಣವಾಗಿ ಎಲ್ಲರಿಗೂ ಇದ್ದೆ ಇರುತ್ತೆ. ೯. ಇದು ಚಂಚಲ ಬುದ್ಧಿಯುಳ್ಳ ಪ್ರಾಣಿ. ೧೦. ಉಡಲು ಸರಿಯಾದ ಇದು ಇಲ್ಲದೆ ತೊಳಲುವರು ನಮ್ಮ ಭಾರತದಲ್ಲಿ ಎಷ್ಟು ಜನರಿಲ್ಲ! ೧೩. ಒಂದು ಲೋಹ. ೧೫. ದೇವರ ಆಸನ. ೧೬. ಮನುಷ್ಯನ ಆವಶ್ಯಕತೆಗಳು (Necessaries) ಪ್ರತಿಯೊಂದು ಪ್ರಜೆಗೂ ಇರಬೇಕೆಂದು ವಾದಿಸುವ ಸಮಾಜನಿರ್ಮಾಣಕ. ೧೭. ವಿಪತ್ತು. ೧೯. ಬೆಳ್ಳಿ. ೨೧....ಯಿಂದ ಬುದ್ಧಿ ವಿಕಲ್ಪವಾಗುವುದು. ೨೩ ತಪಸ್ವಿಯು ಇದಕ್ಕೆ ಒಳಗಾಗಿ ತಮ್ಮ ತಪೋಬಲಗಳನ್ನು ನಾಶಗೊಳಿಸಿರುವರು. ೨೫. ಜನತೆಗೆ ಇವರ ಉಪಯೋಗವು ಜಾಸ್ತಿ. ೨೭. ಮಹಾತ್ಮ ಗಾಂಧಿಯವರ ವ್ಯಕ್ತಿತ್ವವು (Personality) ಎಲ್ಲರನ್ನೂ ...ವಂತೆ ಮಾಡುವುದು. ೨೮. ಸುಮಾಸನ ದ್ರವ್ಯ.

**ಮೇಲಿನಿಂದ ಕೆಳಕ್ಕೆ**—೨. ಶ್ರೀ ಕೃಷ್ಣನ ಸಾಕು ತಂದೆ. ೩. 'ದವನ' ಗಜಿಬಿಜಿಯಾಗಿದೆ. ೪. ಇದರಿಂದ ಅನುಕೂಲ ಪ್ರತಿಕೂಲಗಳೆರಡೂ ಉಂಟು. ೫. ಈತನಿಗೆ ಸಮಾಜದಲ್ಲಿ ಗಣ್ಯಸ್ಥಾನವಿದೆ. ೮. ಹೀಗಿರುವ ಹುಡಿಗಿಗೆ ವರನು ಸಿಕ್ಕಲಿಕ್ಕೆ ಅತಿ ಪ್ರಯಾಸ. ೧೧. ಪ್ರಪಂಚದಲ್ಲಿ ಈ ತತ್ವವನ್ನು ಜಾರಿಗೆ ತಂದರೆ ಸಂತುಷ್ಟಿ ಇರುವುದೆಂದು ಕೆಲವರ ಅಭಿಪ್ರಾಯ. ೧೨ ವಿದ್ಯಾರ್ಥಿಗಳು ಈಗೀಗ ಇದಕ್ಕೆ ಹೆಚ್ಚು ಹೆಚ್ಚಾಗಿ ಗಮನ ಕೊಡುವರು. ೧೪. 'ದಸರ' ಹಿಂದುಮುಂದಾಗಿದೆ. ೧೫ ಮನೆ. ದೇವಸ್ಥಾನ. ೧೭. ಮುಖ್ಯ, ಶ್ರೇಷ್ಠವಾದ. ೧೮. ತನ್ನ ಇದನ್ನು ಉಳಿಸಿಕೊಳ್ಳಬೇಕಾದ್ದು ಪ್ರತಿಯೊಬ್ಬನ ಕರ್ತವ್ಯ. ೨೦. ತಪಸ್ಸು ಮಾಡುವವನು. ೨೧. ನಿಷ್ಕಾರಣವಾಗಿ ಇತರರನ್ನು...ಸೀಚರ ಸ್ವಭಾವ. ೨೨. ಜ್ಞಾಪಕ. ೨೪. ಸ್ವರಾಜ್ಯವನ್ನು...ಮಾರ್ಗದಿಂದ ಸಾಧಿಸಬೇಕೆಂದು ಕೆಲವರು ತವಕಪಡುವರು ೨೬, ದಿವಸ

**ಉತ್ತರಗಳು ತಲಪಬೇಕಾದ ಕೊನೆದಿನ ೫ನೇ ಅಕ್ಟೋಬರ್ ೧೯೪೦, ಸರಿಯಾದ ಉತ್ತರವನ್ನು ತಾಯಿನಾಡುವಿನಲ್ಲಿ ಪ್ರಕಟಿಸುವ ದಿನ ೭ನೇ ಅಕ್ಟೋಬರ್ ೧೯೪೦.**

**ಉತ್ತರಗಳನ್ನು ಕೆಳಕಂಡ ಅಡ್ರೆಸ್ಸಿಗೆ ಕಳುಹಿಸಿರಿ—** ಮೈಸೂರಿನವರು

**ನಂ. ೪೩೫, ನೂರಡಿರಸ್ತೆ (ಹೆಚ್. ವೆಂಕಟರಾಮಯ್ಯ ಆಂಡ್ ಸನ್ಸ್ ಪಕ್ಕ) ರವರಲ್ಲಿ ಕೊಟ್ಟು ರಸೀದಿಪಡೆಯಬಹುದು.**

**ವಿ. ಸೂಚನೆ—ಕೂಪನ್ನುಗಳನ್ನು ಆಫೀಸಿನಲ್ಲಿ ಸಾಯಂಕಾಲ ೬। ಗಂಟೆಯಿಂದ ೮ ಗಂಟೆವರೆವಿಗೂ ಬಂದು ತೆಗೆದುಕೊಂಡು ಹೋಗಬಹುದು.**

# ನಕ್ಕರೆ ಜೀವನವೇ ಸಕ್ಕರೆ

ಗಂಡ:– (ಮನೆಯೊಳಗಿಂದ ಹೊರಗೆ ಬಂದ ಹೆಂಡತಿಯನ್ನು ಕಂಡು) ಯಾಕ್ ಬಂದಿಯಾ ಹೊರಗೆ, ನಿನ್ನ ಮುಟ್ಟ ಸೊಡ್ಡು ಹಿಡಕೊಂಡು!

ಹೆಂಡತಿ:– ನನ್ ಮುಖ ನಿಮಗೆ ಕನ್ನಡಿಯಾಗುತ್ತೆಂದು ನಂಗೇನು ಗೊತ್ತು! ಕ್ಷಮಿಸಿ, ಹೋಗ್ತೇನೆ ಒಳಗೆ.

○ ○ ○

ಹುಸೇನ್:- (ಸಿನೆಮ ಗೃಹಕ್ಕೆ ಹೋಗಿ) ಸಾಮಿ, ಒಂದಾಣೆ ಟಿಕೇಟೊಂದು ಕೊಡಿ.

ಟಿಕೇಟ್‌ಮಾಸ್ತರ್:- ಒಂದಾಣೆ ಟಿಕೇಟಿಲ್ಲ. ಎರಡಾಣೆಯದರಲ್ಲಿಯೂ ಕಾಲೂರಿ ನಿಲ್ಲಲು ಮಾತ್ರ ಜಾಗ ಇದೆ.

ಹುಸೇನ್:– ಒಂದಾಣೆ ತೆಕ್ಕೊಂಡು ಒಳಗೆ ಬಿಡಿ ಸ್ವಾಮಿ. ನಾನು ಒಂದು ಕಾಲಲ್ಲಿ ನಿತ್ತುಬಿಡುತ್ತೇನೆ.

○ ○ ○

ಲೇಡಿ:- (ಕವಾಟುಗಳ ವಸ್ತ್ರಗಳನ್ನೆಲ್ಲಾ ಹೊರಗೆ ಬಿಚ್ಚಿ ಹಾಕಿಸಿ ಎರಡು ಘಂಟೆ ಸಮಯ ನಾನಾ ಪ್ರಶ್ನೆ ಕೇಳಿ ಅನಂತರ ಗಂಟು ಮೋರೆ ಮಾಡಿಕೊಂಡು) ಮೆನೇಜರರಿಲ್ಲವೇ? ಅವರನ್ನು ಕರೆಯಿರಿ. ನಿಮಗೆ ಹೆಚ್ಚಿನ ತಿಳುವಳಿಕೆ ಇರುವಂತಿಲ್ಲ. ಅವರಿಗಿರಬಹುದು

ಶೋಪ್ ಅಸಿಸ್ಟಾಂಟ್:- ನಿಶ್ಚಯ ಮೇಮ್‌ಸಾಬ್. ಹೆಚ್ಚು ತಿಳುವಳಿಕೆ ಇದ್ದೇ ನೀವು ಒಳಬರುವಾಗ ಅವರು ಹೊರ ಹೋದ್ದು.

○ ○ ○

ಬೊಂಬಾಯಿಯ ಲಕ್ಷಾಧೀಶನ ಮಗನೊಬ್ಬನು ಮ್ಯೂಸಿಯಮಿಗೆ ಹೋಗಿ ಸಿಗರೇಟ್ ಸೇದುವನು. ಆಗ ಮ್ಯೂಸಿಯಮ್ ಪೇದೆಯು ಆತನ ಬಳಿಗೆ ಬಂದು, "ಇಲ್ಲಿ ಸಿಗರೇಟ್ ಎಳೆದರೆ 5 ರೂಪಾಯಿ ಜುಲ್ಮಾನೆಗೊಳಗಾಗ ಬೇಕಾಗುವುದು ಸ್ವಾಮಿ.

ಲಕ್ಷಾಧೀಶನ ಮಗ:– ತೆಕ್ಕೋ 10 ರೂಪಾಯಿ ನೋಟು.

ಪೇದೆ:- ನನ್ನ ಕೈಯಲ್ಲಿ ಚಿಲ್ಲರೆ ಇಲ್ಲ ಸ್ವಾಮಿ.

ಲ. ಮಗ:- (ತನ್ನ ಸಂಗಾತಿಯನ್ನು ಕರೆದು) ಇಗೋ ನಿನೂ ಒಂದು ಸಿಗರೇಟ್ ಎಳಿ. ಆಗ 10 ರೂಪಾಯಿಗೆ ಸರಿಯಾಗುವುದು.

○ ○ ○

ವಕೀಲ:- "ನೀನು ಅವನನ್ನು ಕಳ್ಳ, ದರೋಡೆಖೋರ, ಫಟಿಂಗ, ಬಚ್ಚಾಳಿ, ಬಿಕ್ನೇಶಿ, ಬದ್ಮಾಷಿ ಎಂದೆಲ್ಲಾ ಬೈದೆಯಾ?

ಮುದ್ದೈಯಾಲೆ:- ಮತ್ತೆ ಬೈಯ್ಯದೆ?

ವಕೀಲ:- ಮಾನಮರ್ಯಾದೆ ಇಲ್ಲದವನೆಂದೆಯಾ?

ಆಲೆ:- ಅದನ್ನು ಮರೆತು ಬಿಟ್ಟೆ.

○ ○ ○

ಮೇಸ್ಟ್ರು:- (ಪ್ರಾಣಿಗಳ ಕುರಿತು ಪಾಠ ಕಲಿಸುತ್ತಾ) ನಿಮ್ಮಲ್ಲಾರಾದರೂ ಹಲ್ಲಿಲ್ಲದ ಪ್ರಾಣಿಗೊಂದು ಉದಾಹರಣೆ ಕೊಡಬಲ್ಲಿರಾ?

ರಂಗ:- (ಥಟ್ಟನೆ ಎದ್ದು ನಿಂತು) ನಾನು ಕೊಡಬಲ್ಲೆ ಸಾರ್.

ಮೇಸ್ಟ್ರು:- ಒಳ್ಳೇದು. ಹೇಳು.

ರಂಗ:- ನನ್ನ ಮುದಿ ಅಜ್ಜಿ ಸಾರ್.

○ ○ ○

ಹೆಂಡತಿ:- (ಒಮ್ಮೆಯೇ ಬೆದರಿ ಗಂಡನ ಬಳಿಗೋಡಿ) ಅಡಿಗೆ ಮನೆಗೊಂದು ಬೆಕ್ಕು ಬಂದಿದೆ. ಸ್ವಲ್ಪ ಬಂದು ಓಡಿಸುವಿರಾ?

ಗಂಡ:- (ಆಲಸ್ಯಭಾವದಿಂದ) ಅದಕ್ಕೇಕೆ ಇಷ್ಟು ಗಡಿಬಡಿ! ಕರಿಬೆಕ್ಕು ಮನೆಗೆ ಬಂದರೆ ಬಹಳ ಲಕ್ಷಣ.

ಹೆಂಡತಿ:- ಹೌದು. ನಿಮಗೆ ಬಳಸಿಟ್ಟ ಮೀನನ್ನೆಲ್ಲಾ ತಿಂದುಬಿಟ್ಟಿದೆ.


ವಿಚಾರಕ್ರಾಂತಿಯನ್ನೆಬ್ಬಿಸುವ ವಿಷಯಗಳಿಗೆ ಮೀಸಲಿರಿಸಿದ ರಾಷ್ಟ್ರೀಯ ವಾರ ಪತ್ರಿಕೆ—

## ನವಯುಗ

- ಉದಾತ್ತ ವಿಚಾರ, ಸಮಾಚಾರಗಳಿಗಾಗಿ,
- ಉದ್ಬೋಧ ಲೇಖನ, ಕತೆಗಳಿಗಾಗಿ

ವಾರ ವಾರವೂ ನವಯುಗವನ್ನೇ ಓದಿರಿ.

ವಾರ್ಷಿಕ ಚಂದಾ ರೂ. 3—4—0. ಬಿಡಿ ಪ್ರತಿ 0—1—0.

ಜಾಹೀರಾತಿನ ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ.

ಮೆನೇಜರ್, ನವಯುಗ, ಉಡುಪಿ.

***Read & Advertise in***

**NAVAYUGA**

**LEADING KANARESE WEEKLY**

**UDIPI.**



Printed & Published by P. A. K. Upadhyaya at Thulunad Press, Udipi.

**ದುಡ್ಡಿಲ್ಲದಾಗ ಬೇಕಾದುದೇನು?** .... .... .... .... **ಕಡಿಮೆ ಬೆಲೆಯ ಉತ್ತಮ ವ್ಯಾಲು!**

# ★ ಭಾರತೀ ಗ್ರಂಥಮಾಲೆ ★

## ಪುಸ್ತಕಗಳಲ್ಲಿ ಜ್ಞಾನ! ಜ್ಞಾನದಲ್ಲೇ ಮೋಕ್ಷ!!

ದೊಡ್ಡ ಪುಸ್ತಕವನ್ನೋದಲು ಅವಕಾಶ ಕಡಿಮೆಯಾದ, ಕ್ರಯಕ್ಕೆ ಪಡೆಯಲು ಹಣವಿಲ್ಲದ ಈ ಕಾಲದಲ್ಲಿ ಕಡಿಮೆ ಬೆಲೆಯ ದೊಡ್ಡ ಪುಸ್ತಕಗಳು ಎಷ್ಟಿದ್ದರೂ ಸಾಲದು. ಕಟಪಾಡಿಯ ಭಾರತೀಯ ಗ್ರಂಥಮಾಲೆಯ ಕೆಳಗಿನ ಪುಸ್ತಕಗಳೆಲ್ಲಾ ನುರಿತ ಬರಹಗಾರರಿಂದ ಬರೆಯಲ್ಪಟ್ಟು ಬಾಹ್ಯಾಂಗ ಮತ್ತು ಅಂತರಂಗಗಳು ಕನ್ನಡಿಗರ ಕಣ್ಮನವನ್ನು ಸೆಳೆಯುವಂತಿವೆ. ಪ್ರತಿಯೊಂದರ ಬೆಲೆ 4ಆಣೆ ಇದ್ದು ಇಷ್ಟು ಅಗ್ಗವಾದ ದೊಡ್ಡ ಪುಸ್ತಕಳು ಕನ್ನಡದಲ್ಲಿ ವಿರಳವೆನ್ನಬಹುದು.

**೧ ಲೋಪಾಮುದ್ರೆ:—** ಬರೆದವರು ಶ್ರೀ ಜಿ. ವಾಸುದೇವ ರಾಯರು, ದೇಶೀಯ ವಿದ್ಯಾಶಾಲಾ, ಬೆಂಗಳೂರು. ಪುಟ 96+8. ಇದು ಕಾವೇರಿ ಮಾಹಾತ್ಮ್ಯೆಯನ್ನು ಸರಸವಾದ ಶೈಲಿಯಲ್ಲಿ ವರ್ಣಿಸಿದ ಪುರಾಣ ಕತೆ. ಸ್ತ್ರೀಯರು ಅವಶ್ಯ ಓದಬೇಕು.

**೨ ಚಿಗುರು:—** ಬೇರೆ ಬೇರೆ ಕತೆಗಾರರಿಂದ ಬರೆಯಲ್ಪಟ್ಟ ಹತ್ತು ಸಣ್ಣ ಕತೆಗಳ ಸಂಗ್ರಹ. ಪುಟ 74+6. ಇದರಲ್ಲಿಯ ಕತೆಗಳು ನಮ್ಮನ್ನು ಅಳಿಸಿ, ನಗಿಸಿ ನಾಚಿಸಿ, ನಮ್ಮ ಜೀವನದ ನೈಜ ಚಿತ್ರವನ್ನು ಕಣ್ಣ ಮುಂದಿರಿಸುವವು.

**೩ ಪ್ರತೀಕಾರ:—** ಲೇಖಕರು ಶ್ರೀ ರಂಗ. ಪುಟ 68+8. ಇದೊಂದು ನವಪೌರಾಣಿಕ ನಾಟಕ. ಅರ್ಜುನನಿಂದ ಅವಮಾನಿತನಾದ ಬಭ್ರುವಾಹನನು ಯುದ್ಧಕ್ಕೆ ಸಿದ್ಧನಾಗಿ 'ಪ್ರತೀಕಾರ' ಮಾಡಿದ ಕಥಾಭಾಗವು ನಾಟಕ ರೂಪದಲ್ಲಿ ಬರೆಯಲ್ಪಟ್ಟಿದೆ.

**೪ ಬೆಳಕು:—** ಇದರಲ್ಲಿ ಉತ್ತಮವಾದ ಮೂರು ಕತೆಗಳಿವೆ. ನಮ್ಮನ್ನು ನಗಿಸಿ, ಕರಗಿಸಿ, ವಿಚಾರ ಮಬ್ಬಿಸುವ ಕತೆಗಳಿವು. ಇವನ್ನೋದುವುದರಿಂದ ನಿಜವಾಗಿಯೂ ಹೃದಯದಲ್ಲೊಂದು ನವೀನ ಬೆಳಕು ಹರಿಯದಿರದು.

**೫ ತಿನಸು:—** ಕನ್ನಡದಲ್ಲಿ ತೀರ ಹೊಸ ಮಾದರಿಯ ಪುಸ್ತಕವಿದು. ಇದರಲ್ಲಿ ಕತೆ, ಕವಿತೆ, ಪ್ರಬಂಧ ವಿಚಾರಪರ ಲೇಖನಗಳಿದ್ದು ಇದು ಪಂಚಕಜ್ಜಾಯದಂತಿದೆ. ಹಳ್ಳಿಗರ ಅಂಧಶ್ರದ್ಧೆ, ಹಳ್ಳೀ ಮನೆವಾರ್ತೆ ಮೊದಲಾದ ಹಳ್ಳಿಯ ಚಿತ್ರಗಳನ್ನು ಪ್ರತಿಯೊಬ್ಬರೂ ಓದಿ ನೋಡಬೇಕು. ಪುಟ 68-4.

**೬ ಪಂಚಾರತಿ:—** ೫ ಏಕಾಂಕ ನಾಟಕಗಳ ಸಂಗ್ರಹ; ಪುಟ 80, ಕರ್ನಾಟಕದ ಪ್ರಸಿದ್ಧ ಲೇಖಕರಾದ ಶ್ರೀ ಎನ್. ಕೆ. ಕುಲಕರ್ಣಿ, ಎಂ. ಎ., ಶ್ರೀ. ಎಸ್. ವೆಂಕಟರಾಜ, ಶ್ರೀ. ಬಿ. ಅಶ್ವತ್ಥನಾರಾಯಣ ರಾವ್, ಪ್ರೊ. ಆರ್. ವಿ. ಜಹಗೀರ್‌ದಾರ್ ಎಂ. ಎ. (ಲಂಡನ್) ಶ್ರೀ. ಕೊರಡ್ಕಲ್ ಶ್ರೀನಿವಾಸರಾವ್ ಇವರೈವರ ಮುಸುಕು, ಪ್ರಾಯಶ್ಚಿತ್ತ, ಜ್ವಾಲಾಮುಖಿ, ಭಾಮಿನಿಯ ಭಾಗ್ಯೋದಯ, ಓಂ ಬೋರಿ ಬಸ್ವಗೆ ಮೂರುಸಾವಿರ ಎಂಬ ವಿಚಾರ ಕ್ರಾಂತಿಯ ಸ್ವಾರಸ್ಯವಾದ ಐದು ನಾಟಕಗಳಿವೆ.

**ಈ ಆರೂ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ**

**ಟಪ್ಪಾಲು** ಖರ್ಚು ಮಾಫತ್ತು. ರೂ. 1-8-0ನ್ನು ಮನಿಯಾರ್ಡರ್ ಮೂಲಕ ಯಾ ಸ್ಟಾಂಪು ಮೂಲಕ ಕಳಿಸಿದೊಡನೆ ಈ ಆರೂ ಪುಸ್ತಕಗಳನ್ನು ಬುಕ್‌ಪೋಸ್ಟ್ ಮಾಡಿ ಕಳಿಸಲಾಗುವುದು.

**ಒಂದೊಂದು ಪುಸ್ತಕವನ್ನು ಅಪೇಕ್ಷಿಸುವವರು 0-4-6 ಸ್ಟಾಂಪು ಕಳುಹಿಸಬೇಕು.**

ವ್ಯಾಪಾರಿಗಳಿಗೆ ಕಮಿಶನ್ ಕೊಡಲಾಗುತ್ತದೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ಉಡುಪಿ ಏಜಂಟರಿಗೆ ಬರೆಯಿರಿ.

**ನವಭಾರತ ಪುಸ್ತಕ ಭಂಡಾರ, ಉಡುಪಿ.**

# War Declared On Worry!

MANY PEOPLE HAVE DECLARED WAR ON WORRIES OF THEIR PRINTING PROBLEM AND HAVE SUCCEEDED WITH THE COMMENDABLE HELF OF THEIR GREATEST ALLY – THE GENERAL SUPPLIES LIMITED UDIPI.,

TBERE IS NO REASON WHY YOU SHOULD FACE THE WORST ENEMY OF HUMANITY – THE WORRY.

SIGN A TREATY WITH THE POPULAR PRINTING FIRM.

**GENERAL SUPPLIES, LIMITED.**

UDIPI — S. INDIA.